ಸಂಪುಟ 01 । ಸಂಚಿಕೆ 126 । ಭಾನುವಾರ 12 ಜುಲೈ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸುಗೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಅಂತರರಾಷ್ಟ್ರೀಯ ಮಲಾಲಾ ದಿನ (International Malala Day):** ಸಂಯುಕ್ತ ರಾಷ್ಟ್ರ ಸಂಸ್ಥೆ (UN) ಘೋಷಿಸಿರುವ ಈ ದಿನವು ನೋಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತೆ ಮಲಾಲಾ ಯೂಸಫ್‌ಜೈ ಅವರ ಜನ್ಮದಿನದ ಅಂಗವಾಗಿ ಆಚರಿಸಲಾಗುತ್ತದೆ. ವಿಶ್ವಶಾಂತಿ, ಪ್ರತಿಯೊಬ್ಬ ಹೆಣ್ಣುಮಗುವಿಗೂ ಗುಣಮಟ್ಟದ ಶಿಕ್ಷಣದ ಹಕ್ಕು ಹಾಗೂ ಬಾಲಕಿಯರ ಸಬಲೀಕರಣದ ಮಹತ್ವವನ್ನು ಸಾರುವ ಉದ್ದೇಶದಿಂದ ಈ ದಿನವನ್ನು ಆಚರಿಸಲಾಗುತ್ತದೆ.

**2) ಅಂತರರಾಷ್ಟ್ರೀಯ ಆಶಾದಿನ (International Day of Hope):** ಸಂಯುಕ್ತ ರಾಷ್ಟ್ರಗಳ ಸಾಮಾನ್ಯ ಸಭೆಯು ಘೋಷಿಸಿರುವ ಈ ದಿನವು ಆಶೆಯನ್ನು ಶಾಂತಿ, ಮಾನವ ಘನತೆ, ಸಹಿಷ್ಣುತೆ ಮತ್ತು ಎಲ್ಲರಿಗೂ ಸಮಾನ ಪ್ರಗತಿಯ ಮೂಲಭೂತ ತತ್ವವೆಂದು ಒತ್ತಿಹೇಳುತ್ತದೆ. ಉತ್ತಮ ಭವಿಷ್ಯ ನಿರ್ಮಾಣಕ್ಕೆ ಆಶಾವಾದದ ಮಹತ್ವವನ್ನು ಈ ದಿನ ನೆನಪಿಸುತ್ತದೆ.

**3) ರಾಷ್ಟ್ರೀಯ ಸರಳತೆ ದಿನ (National Simplicity Day):** 1817ರ ಜುಲೈ 12ರಂದು ಜನಿಸಿದ ಅಮೆರಿಕದ ತತ್ವಜ್ಞಾನಿ ಹಾಗೂ ಲೇಖಕ ಹೆನ್ರಿ ಡೇವಿಡ್ ಥೊರೋ ಅವರ ಜೀವನ ಮತ್ತು ಸರಳ ಜೀವನದ ತತ್ವವನ್ನು ಗೌರವಿಸಲು ಈ ದಿನವನ್ನು ಆಚರಿಸಲಾಗುತ್ತದೆ. ತಂತ್ರಜ್ಞಾನದಿಂದ ಸ್ವಲ್ಪ ಸಮಯ ದೂರವಿರುವುದು, ಅನಗತ್ಯ ವಸ್ತುಗಳ ಗೊಂದಲವನ್ನು ಕಡಿಮೆ ಮಾಡುವುದು ಹಾಗೂ ಸರಳ, ಸಮತೋಲನಯುತ ಜೀವನಶೈಲಿಯನ್ನು ಅಳವಡಿಸಿಕೊಳ್ಳಲು ಈ ದಿನ ಪ್ರೇರೇಪಿಸುತ್ತದೆ.

**4) ಪೇಪರ್ ಬ್ಯಾಗ್ ದಿನ (Paper Bag Day):** ಪ್ರತಿ ವರ್ಷ ಜುಲೈ 12ರಂದು ಪೇಪರ್ ಬ್ಯಾಗ್ ದಿನವನ್ನು ಆಚರಿಸಲಾಗುತ್ತದೆ. 1852ರಲ್ಲಿ ಫ್ರಾನ್ಸಿಸ್ ವೋಲ್ (Francis Wolle) ಅವರು ಕಾಗದದ ಚೀಲಗಳನ್ನು ಯಂತ್ರದ ಮೂಲಕ ದೊಡ್ಡ ಪ್ರಮಾಣದಲ್ಲಿ ತಯಾರಿಸುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ. ಪ್ಲಾಸ್ಟಿಕ್ ಚೀಲಗಳಿಗೆ ಪರಿಸರ ಸ್ನೇಹಿ ಪರ್ಯಾಯವಾಗಿ ಕಾಗದದ ಚೀಲಗಳ ಬಳಕೆಯನ್ನು ಉತ್ತೇಜಿಸುವುದು ಮತ್ತು ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ.

**5) ರಾಷ್ಟ್ರೀಯ ವಿಭಿನ್ನ ಕಣ್ಣಿನ ಬಣ್ಣದ ದಿನ (National Different Colored Eyes Day):** ಪ್ರತಿ ವರ್ಷ ಜುಲೈ 12ರಂದು ರಾಷ್ಟ್ರೀಯ ವಿಭಿನ್ನ ಕಣ್ಣಿನ ಬಣ್ಣದ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ಹೆಟೆರೋಕ್ರೋಮಿಯಾ (Heterochromia) ಎಂಬ ಅಪರೂಪದ ಮತ್ತು ವಿಶಿಷ್ಟ ಸ್ಥಿತಿಯ ಬಗ್ಗೆ ಅರಿವು ಮೂಡಿಸಲು ಸಮರ್ಪಿತವಾಗಿದೆ. ಈ ಸ್ಥಿತಿಯಲ್ಲಿ ವ್ಯಕ್ತಿಯ ಎರಡು ಕಣ್ಣುಗಳ ಐರಿಸ್‌ಗಳು ವಿಭಿನ್ನ ಬಣ್ಣಗಳನ್ನು ಹೊಂದಿರುತ್ತವೆ. ವೈವಿಧ್ಯತೆಯನ್ನು ಗೌರವಿಸುವುದು, ಅಪರೂಪದ ಆರೋಗ್ಯ ಸ್ಥಿತಿಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಪ್ರತಿಯೊಬ್ಬರ ವಿಶಿಷ್ಟತೆಯನ್ನು ಸಂಭ್ರಮಿಸುವುದು ಈ ದಿನದ ಉದ್ದೇಶವಾಗಿದೆ.

## ಸುಭಾಷಿತ

"ಬದುಕಿನಲ್ಲಿ ಬರುವ ಕಷ್ಟಗಳು ನಿನ್ನನ್ನು ಮುರಿಯಲು ಅಲ್ಲ, ಬದಲಿಗೆ ನಿನ್ನ ಶಕ್ತಿಯನ್ನು ಅರಿಯಲು."

ರವೀಂದ್ರನಾಥ ಟ್ಯಾಗೋರ್

## ಸನ್ ರೈಸ್ ಕಾಲೇಜಿನ ಶನಿವಾರದ ವಿಶೇಷ ಉಪನ್ಯಾಸ ನೀಡಿದ ಡಾ.ಸುಮಾ

# ದಂತ ಆರೋಗ್ಯ ಕಾಪಾಡಿ, ಆರೋಗ್ಯಕರ ಜೀವನ ನಡೆಸಿ: ಡಾ. ಸುಮಾ ಕರೆ

O ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜು, ಸಿಂಧನೂರು ವತಿಯಿಂದ ಪ್ರತೀ ಶನಿವಾರ ಹಮ್ಮಿಕೊಳ್ಳಲಾಗುವ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಂಗವಾಗಿ,**

ದಿನಾಂಕ 11 ಜುಲೈ 2026, ಶನಿವಾರ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ದಂತ ಆರೋಗ್ಯ ಜಾಗೃತಿ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮಕ್ಕೆ ಸಿಂಧನೂರಿನ ಡಾ. ಸುಮಾ ಡೆಂಟಲ್ ಕ್ಲಿನಿಕ್ನ ಖ್ಯಾತ ದಂತ ತಜ್ಞರಾದ ಡಾ. ಸುಮಾ (BDS, MDS Orthodontics & Dentofacial Orthopedics) ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಉಪನ್ಯಾಸ ನೀಡಿದರು.ತಮ್ಮ ಉಪನ್ಯಾಸದಲ್ಲಿ ಮಾತನಾಡಿದ ಡಾ. ಸುಮಾ ಅವರು, "ಆರೋಗ್ಯಕರ ಹಲ್ಲುಗಳು ಉತ್ತಮ ಆರೋಗ್ಯದ ಮೊದಲ ಹೆಜ್ಜೆ.ನಾವು ಸೇವಿಸುವ ಆಹಾರವನ್ನು ಸರಿಯಾಗಿ ಜಗಿದು ಜೀರ್ಣಕ್ರಿಯೆ ಸುಗಮವಾಗಲು ಹಲ್ಲುಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ.

ಹಲ್ಲುಗಳ ಸ್ವಚ್ಛತೆಯನ್ನು ನಿರ್ಲಕ್ಷಿಸಿದರೆ ಹಲ್ಲು ಹುಳುಕು, ವಸಡು ಕಾಯಿಲೆಗಳು, ದುರ್ವಾಸನೆ, ಬಾಯಿಯ ಸೋಂಕುಗಳು ಸೇರಿದಂತೆ ಅನೇಕ ಆರೋಗ್ಯ ಸಮಸ್ಯೆಗಳು ಉಂಟಾಗಬಹುದು.

ಆದ್ದರಿಂದ ಪ್ರತಿಯೊಬ್ಬರೂ ದಿನಕ್ಕೆ ಕನಿಷ್ಠ ಎರಡು ಬಾರಿ ಸರಿಯಾದ ವಿಧಾನದಲ್ಲಿ ಹಲ್ಲುಗಳನ್ನು ಉಜ್ಜಬೇಕು ಹಾಗೂ ನಿಯಮಿತವಾಗಿ ದಂತ ತಪಾಸಣೆ ಮಾಡಿಸಿಕೊಳ್ಳಬೇಕು" ಎಂದು ತಿಳಿಸಿದರು.ವಿದ್ಯಾರ್ಥಿಗಳಿಗೆ ಹಲ್ಲು ಉಜ್ಜುವ ಸರಿಯಾದ ವಿಧಾನವನ್ನು ವಿವರಿಸಿದ ಅವರು, ಸರಿಯಾದ ಟೂತ್‌ಬ್ರಷ್ ಹಾಗೂ ಫ್ಲೋರೈಡ್ ಇರುವ ಟೂತ್‌ಪೇಸ್ಟ್ ಬಳಕೆ,

ನಾಲಿಗೆಯ ಸ್ವಚ್ಛತೆ, ಊಟದ ನಂತರ ಬಾಯಿ ತೊಳೆಯುವ ಅಭ್ಯಾಸ, ಅತಿಯಾದ ಸಿಹಿ ಪದಾರ್ಥಗಳು ಮತ್ತು ತಂಪು ಪಾನೀಯಗಳ ಸೇವನೆಯನ್ನು ನಿಯಂತ್ರಿಸುವುದು, ತಂಬಾಕು ಹಾಗೂ ಗುಟ್ಕಾ ಸೇವನೆಯಿಂದ ದೂರವಿರುವುದು ಸೇರಿದಂತೆ ಹಲವು ಆರೋಗ್ಯ ಸಲಹೆಗಳನ್ನು ನೀಡಿದರು. ಇದಲ್ಲದೆ, ಹಲ್ಲುಗಳ ಜೋಡಣೆ, ಮುಖದ ಬೆಳವಣಿಗೆ, ಮಕ್ಕಳಲ್ಲಿ ಹಲ್ಲಿನ ಆರೈಕೆ, ವಯಸ್ಕರಲ್ಲಿ ಬಾಯಿಯ ಆರೋಗ್ಯದ ಮಹತ್ವ ಹಾಗೂ ದಂತ ಸಮಸ್ಯೆಗಳನ್ನು ಆರಂಭದಲ್ಲೇ ಗುರುತಿಸಿ ಚಿಕಿತ್ಸೆ ಪಡೆಯುವ ಅಗತ್ಯವನ್ನು ವಿವರಿಸಿದರು. ಉತ್ತಮ ಬಾಯಿಯ ಆರೋಗ್ಯವು ದೈಹಿಕ ಆರೋಗ್ಯ, ಆತ್ಮವಿಶ್ವಾಸ ಹಾಗೂ ವ್ಯಕ್ತಿತ್ವ ವಿಕಾಸಕ್ಕೂ ಸಹಕಾರಿಯಾಗಿದೆ













ಎಂದು ತಿಳಿಸಿದರು.ನರ್ಸಿಂಗ್ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, "ನರ್ಸಿಂಗ್ ಎನ್ನುವುದು ಕೇವಲ ಒಂದು ಉದ್ಯೋಗವಲ್ಲ, ಅದು ಮಾನವೀಯ ಸೇವೆಯ ಶ್ರೇಷ್ಠ ವೃತ್ತಿಯಾಗಿದೆ.

ರೋಗಿಗಳ ಆರೈಕೆಯಲ್ಲಿ ನರ್ಸಿಂಗ್ ಸಿಬ್ಬಂದಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಜ್ಞಾನ, ಕೌಶಲ್ಯ, ಸೇವಾ ಮನೋಭಾವ, ಶಿಸ್ತು ಹಾಗೂ ಕರುಣೆ ಹೊಂದಿರುವ ನರ್ಸಿಂಗ್ ವಿದ್ಯಾರ್ಥಿಗಳು ಸಮಾಜದಲ್ಲಿ ಉತ್ತಮ ಆರೋಗ್ಯ ಸೇವೆಯನ್ನು ನೀಡಬಲ್ಲರು. ಪ್ರತಿಯೊಬ್ಬ ವಿದ್ಯಾರ್ಥಿಯೂ ಆತ್ಮವಿಶ್ವಾಸದಿಂದ ಕಲಿತು ಉತ್ತಮ ಆರೋಗ್ಯ ವೃತ್ತಿಪರರಾಗಿ ಸಮಾಜಕ್ಕೆ ಸೇವೆ ಸಲ್ಲಿಸಬೇಕು" ಎಂದು ಪ್ರೇರಣಾದಾಯಕ ಸಂದೇಶ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಲಾಜರ್ ಸಿರಿಲ್ ಅವರು, "ನಮ್ಮ ದೇಹದ ಪ್ರತಿಯೊಂದು ಅಂಗವೂ ಅಮೂಲ್ಯವಾಗಿದೆ.

ಅದರಲ್ಲಿ ಹಲ್ಲುಗಳು ಕೂಡ ಪ್ರಮುಖವಾದ ಅಂಗವಾಗಿದ್ದು, ಅವುಗಳ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಆರೋಗ್ಯಕರ ಹಲ್ಲುಗಳು ಉತ್ತಮ ಆರೋಗ್ಯಕ್ಕೆ ಆಧಾರ. ವಿದ್ಯಾರ್ಥಿಗಳು ಇಂತಹ ಉಪನ್ಯಾಸಗಳ ಮೂಲಕ ಆರೋಗ್ಯ ಜಾಗೃತಿಯನ್ನು ಬೆಳೆಸಿಕೊಳ್ಳಬೇಕು ಹಾಗೂ ತಮ್ಮ ಜೀವನದಲ್ಲೂ ಅಳವಡಿಸಿಕೊಳ್ಳಬೇಕು. ಇಂದು ದಂತ ಆರೋಗ್ಯದ ಕುರಿತು ಅತ್ಯಂತ ಉಪಯುಕ್ತ ಹಾಗೂ ವೈಜ್ಞಾನಿಕ ಮಾಹಿತಿಯನ್ನು ನೀಡಿದ ಡಾ. ಸುಮಾ ಮೇಡಂ ಅವರಿಗೆ ನಮ್ಮ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಧನ್ಯವಾದಗಳು" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ದಂತ ಆರೋಗ್ಯಕ್ಕೆ ಸಂಬಂಧಿಸಿದ ಹಲವು ಪ್ರಶ್ನೆಗಳನ್ನು ಕೇಳಿ ತಮ್ಮ ಸಂದೇಹಗಳನ್ನು ನಿವಾರಿಸಿಕೊಂಡರು. ಉಪನ್ಯಾಸವು ಅತ್ಯಂತ ಮಾಹಿತಿ ಪ್ರಧಾನ ಹಾಗೂ ಪ್ರೇರಣಾದಾಯಕವಾಗಿದ್ದು, ವಿದ್ಯಾರ್ಥಿಗಳು ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು. ಕೊನೆಯಲ್ಲಿ ಸನ್ ರೈಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ, ಕಾರ್ಯದರ್ಶಿಗಳಾದ ಇರ್ಷಾದ್ ಕೆ, ಸಂಸ್ಥೆಯ ಎಲ್ಲಾ ವಿಭಾಗಗಳ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಪರವಾಗಿ ವಿಶೇಷ ಉಪನ್ಯಾಸ ನೀಡಿದ ಡಾ. ಸುಮಾ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಲಾಯಿತು.

## ಮಂತ್ರಿ ಮಂಡಡದಲ್ಲಿ ಶಾಸಕ ಜೆ.ಎನ್.ಗಣೇಶಗೆ ಸಚಿವ ಸ್ಥಾನ ನೀಡುವಂತೆ ಆಗ್ರಹ

O ನೈಜ್ಯ ದೆಸೆ ನ್ಯೂಸ್



**ಬಳ್ಳಾರಿ / ಕಂಪ್ಲಿ: ಕ್ಷೇತ್ರ ಸೇರಿದಂತೆ ನಾಡಿನ ಜನರ ನಾಡಿ ಮಿಡಿತ ಅರಿತಿರುವ ಶಾಸಕ ಜೆ.ಎನ್.ಗಣೇಶಗೆ ಸಚಿವ ಸ್ಥಾನ ನೀಡುವ ಮೂಲಕ ಜನರ ಸೇವೆಗೆ ಅನುವು ಮಾಡಿಕೊಡಬೇಕೆಂದು ರಾಮಸಾಗರ ಗ್ರಾಮದ ಗಂಗಾಮತ ಸಮಾಜದ ಅಧ್ಯಕ್ಷ ಬಿ. ಮಂಜುನಾಥ ಒತ್ತಾಯಿಸಿದರು.**

ಅವರು ತಾಲೂಕಿನ ರಾಮಸಾಗರ ಗ್ರಾಮದಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿ, ಜನನಾಯಕ ಜೆ.ಎನ್.ಗಣೇಶ ಅವರು ಶಾಸಕರಾದ ದಿನದಿಂದಲೂ ಕಳೆದ ಏಂಟು ವರ್ಷದಲ್ಲಿ ಸಾಕಷ್ಟು ಅನುದಾನ ತಂದು, ಗ್ರಾಮ ಸೇರಿದಂತೆ ಕ್ಷೇತ್ರದಲ್ಲಿ ಅಭಿವೃದ್ಧಿ ಜೊತೆಗೆ ಜನತೆಗೆ ಸೌಲಭ್ಯಗಳನ್ನು ಕಲ್ಪಿಸಿದ್ದಾರೆ. ಜನರ ಕಷ್ಟಗಳಿಗೆ ಸ್ಪಂದಿಸಿ, ಈಡೇರಿಸುವ ನಿಟ್ಟಿನಲ್ಲಿ ಶಾಸಕರ ಶ್ರಮ ದೊಡ್ಡದಿದೆ. ಸಚಿವ ಸ್ಥಾನ ದೊರೆತಲ್ಲಿ ಇನ್ನಷ್ಟು ಅಭಿವೃದ್ಧಿ ಸೇವೆಯೊಂದಿಗೆ ರಾಜ್ಯದ ಜನರ ಸಂಕಷ್ಟಕ್ಕೆ ಸಕಾಲದಲ್ಲಿ ಸ್ಪಂದಿಸಲಿದ್ದಾರೆ. ಆದ್ದರಿಂದ ಕಾಂಗ್ರೆಸ್ ಹೈಕಮಾಂಡ್, ರಾಜ್ಯದ ವರಿಷ್ಠರು, ಸಿಎಂ ಅವರು ಕಂಪ್ಲಿ ಶಾಸಕ ಜೆ.ಎನ್.ಗಣೇಶ್‌ಗೆ ಸಚಿವ ಸಂಪುಟದಲ್ಲಿ ಅವಕಾಶ ಮಾಡಿಕೊಡಬೇಕೆಂದರು.

## ರಾಮಸಾಗರದಲ್ಲಿ ವಿಜೃಂಭಣೆಯಿಂದ ಗಂಗಾದೇವಿ ಗಂಗೆಸ್ಥಳ, ಭಾವಚಿತ್ರ ಮೆರವಣಿಗೆ

O ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ತಾಲೂಕಿನ ರಾಮಸಾಗರ ಗ್ರಾಮದಲ್ಲಿ ಗಂಗಾಮತ ಸಮಾಜದಿಂದ ಗಂಗಾದೇವಿ ಗಂಗೆಸ್ಥಳ ಮತ್ತು ಭಾವಚಿತ್ರ ಮೆರವಣಿಗೆ ಶುಕ್ರವಾರ ಅದ್ಧೂರಿಯಾಗಿ ನಡೆಯಿತು.**

ಶ್ರದ್ಧಾಭಕ್ತಿಯಿಂದ ನೆರವೇರಿದವು.ಮೆರವಣಿಗೆ ಗಂಗಾದೇವಿ ದೇವಸ್ಥಾನದಿಂದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಎದುರು ಬಸವಣ್ಣ ಮೂಲಕ ಪುನಃ ದೇವಸ್ಥಾನದಲ್ಲಿ ಸಮಾವೇಶಗೊಂಡಿತು. ಮಹಿಳೆ ಕಳಸ, ಡೊಳ್ಳು ಕುಣಿತ ಸೇರಿದಂತೆ ನಾನಾ ಕಲಾ ಪ್ರಕಾರಗಳೊಂದಿಗೆ ವಿಜೃಂಭಣೆಯಿಂದ



ಇಲ್ಲಿನ ಮುಖ್ಯರಸ್ತೆ ಬದಿಯಲ್ಲಿ ಗಂಗಾಮತ ಸಮಾಜದ ಗಂಗಾ ಪರಮೇಶ್ವರಿ ಸೇವಾ ಸಮಿತಿ ಟ್ರಸ್ಟ್‌ನ ನಾಮಫಲಕ ಉದ್ಘಾಟಿಸಲಾಯಿತು. ತುಂಗಭದ್ರ ನದಿ ತಟದಲ್ಲಿ ಗಂಗೆಪೂಜೆ ಸಲ್ಲಿಸಿ, ನಂತರ ಗಂಗೆಸ್ಥಳ ಮೆರವಣಿಗೆ ಜರುಗಿತು. ಪೂಜಾ, ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮ ಗಂಗಾದೇವಿ ಭಾವಚಿತ್ರ ಮೆರವಣಿಗೆ ನೆರವೇರಿತು. ಈ ಸಂದರ್ಭದಲ್ಲಿ ಗಂಗಾಮತ ಸಮಾಜದ ಮುಖಂಡರು, ಯುವಕರು, ಮಹಿಳೆಯರು, ಮಕ್ಕಳು ಸೇರಿದಂತೆ ಎಲ್ಲಾ ವರ್ಗದವರು ಪಾಲ್ಗೊಂಡಿದ್ದರು. ನಂತರ ಅನ್ನದಾಸೋಹ ಏರ್ಪಡಿಸಲಾಗಿತ್ತು.

## ರಾಷ್ಟ್ರೀಯ ಲೋಕ ಅದಾಲತನಲ್ಲಿ ಮತ್ತೊಂದು ಜೋಡಿಯನ್ನು ಒಗ್ಗೂಡಿಸಿದ ನ್ಯಾ. ಉಂಡಿ ಮಂಜುಳಾ ಶಿವಪ್ಪ

O ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಇಂದು ತಾಲೂಕಿನ ನ್ಯಾಯಾಲಯದಲ್ಲಿ ರಾಷ್ಟ್ರೀಯ ಲೋಕ ಅದಾಲತನ್ನು ಆಯೋಜಿಸಲಾಗಿದ್ದು ನ್ಯಾ. ಉಂಡಿ ಮಂಜುಳಾ ಶಿವಪ್ಪ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನೇತೃತ್ವದಲ್ಲಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಒಟ್ಟು ಬಾಕಿ ಪ್ರಕರಣಗಳಲ್ಲಿ 685 ಪ್ರಕರಣಗಳು ಇಂದು ಇತ್ಯಾರ್ಥಪಡಿಸಲಾಗಿದ್ದು ಇದರ ಒಟ್ಟು ಮೊತ್ತ 2,28,09,710 ರೂ.ಇರುತ್ತದೆ.**




ಹಾಗೂ ವಿವಾಹ ವಿಚ್ಛೇದಕ್ಕೆ ಅರ್ಜಿ ಸಲ್ಲಿಸಿದ ದಂಪತಿಗಳಿಗೆ ನ್ಯಾಯಾಧೀಶರು ಮನಹೊಲಿಸಿ ಪರಸ್ಪರ ಹೂವಿನಹಾರ ಬದಲಿಸುವ ಮೂಲಕ ದಂಪಗಳನ್ನು ಒಗ್ಗೂಡಿಸಿ ಪ್ರಕರಣವನ್ನು ಇತ್ಯಾರ್ಥಗೊಳಿಸಿದ್ದಾರೆ, ಮತ್ತು ನ್ಯಾ. ಅಂಬಣ್ಣ ಕೆ. ಪ್ರಧಾನ ಸಿವಿಲ್ ನ್ಯಾಯಾಧೀಶರ ನೇತೃತ್ವದಲ್ಲಿ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಒಟ್ಟು ಬಾಕಿ ಪ್ರಕರಣಗಳಲ್ಲಿ 878 ಪ್ರಕರಣಗಳು ಇಂದು ಇತ್ಯಾರ್ಥಪಡಿಸಲಾಗಿದ್ದು ಇದರ ಒಟ್ಟು ಮೊತ್ತ 15,94,518 ರೂ.ಇರುತ್ತದೆ. ಹಾಗೂ ನ್ಯಾ. ಸಿದ್ರಾಮ ರೆಡ್ಡಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನೇತೃತ್ವದಲ್ಲಿ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಒಟ್ಟು ಬಾಕಿ ಪ್ರಕರಣಗಳಲ್ಲಿ 765 ಪ್ರಕರಣಗಳು ಇತ್ಯಾರ್ಥಪಡಿಸಲಾಗಿದ್ದು ಇದರ ಒಟ್ಟು ಮೊತ್ತ 12,95,753 ರೂ.ಇರುತ್ತದೆ.


ಮೂರು ನ್ಯಾಯಾಲಯದಲ್ಲಿ ಒಟ್ಟು ವ್ಯಾಜ್ಯಪೂರ್ವ ಪ್ರಕರಣಗಳು 7522 ಪ್ರಕರಣಗಳು ಇತ್ಯಾರ್ಥಪಡಿಸಲಾಗಿದ್ದು ಇದರ ಒಟ್ಟು ಮೊತ್ತ. 53,10,955 ರೂ ಆಗಿರುತ್ತದೆಂದು ತಿಳಿದು ಬಂದಿದೆ . ಈ ಸಂದರ್ಬದಲ್ಲಿ ಹನುಮಂತಪ್ಪ .ವೈ ವಕೀಲರು , ನಾಗರಾಜ ಏಲಿಗಾರ, ಭೂಪನಗೌಡ, ಬಾಲರಾಜ ಸಾಗರ, ಹಾಜಿಬಾಬ, ಉಪೇಂದ್ರ, ವಿಶ್ವನಾಥ, ಶೀವರಾಜ ಪಾಟೀಲ್, ಅಮರೇಶ, ಎಮ್.ಡಿ ಕೈಹೀಮ್, ಲೋಕೇಶ, ಆದಪ್ಪ, ಶಶಿಧರ, ವೀಣಾಶ್ರೀ, ಶಿವಕುಮಾರ ಸೇರಿದಂತೆ ಇತರೆ ವಕೀಲರು ಇದ್ದರು.


## ದ್ವಿಚಕ್ರ ವಾಹನ ಚಲಾಯಿಸಿದ ಕಂಪ್ಲಿಯ ಇಬ್ಬರು ಅಪ್ರಾಪ್ತ ಬಾಲಕರಿಗೆ ಹಾಗೂ ಮಾಲೀಕರಿಗೆ ತಲಾ 25 ಸಾವಿರ ರೂ ದಂಡ

O ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಪಟ್ಟಣದಲ್ಲಿ ದ್ವಿಚಕ್ರ ವಾಹನ ಚಲಾಯಿಸಿದ ಇಬ್ಬರು ಅಪ್ರಾಪ್ತ ಬಾಲಕರಿಗೆ ಮತ್ತು ದ್ವಿಚಕ್ರ ವಾಹನ ನೀಡಿದ ಇಬ್ಬರು ಮಾಲೀಕರಿಗೆ ನ್ಯಾಯಾಲಯವು ತಲಾ 25 ಸಾವಿರ ರೂ ದಂಡವನ್ನು ವಿಧಿಸಿದ್ದಾರೆ.**

ಪಟ್ಟಣದ ಬಸ್ ನಿಲ್ದಾಣದ ಹತ್ತಿರ ಪೊಲೀಸರು ವಾಹನಗಳ ತಪಾಸಣೆ ನಡೆಸುವ ಸಂದರ್ಭದಲ್ಲಿ ಎರಡು ಬೈಕ್ ಗಳನ್ನು ತಡೆದು ನಿಲ್ಲಿಸಿದಾಗ ಈ ದ್ವಿ ಚಕ್ರವಾಹನಗಳನ್ನು ಚಲಾಯಿಸುತ್ತಿರುವುದು ಅಪ್ರಾಪ್ತರೆಂದು ತಿಳಿದು ಬಂದಿದ್ದು, ಈ ಸಂಬಂಧ ಇಂಡಿಯನ್ ಮೋಟರ್ ವೆಹಿಕಲ್ ಕಾಯ್ದೆಡಿಯಲ್ಲಿ ಪ್ರಕರಣ


KLB-22
(Rule 21, Account Rules 1967)
RECEIPT FOR MONEY RECEIVED
ಸ್ವೀಕೃತಿ ಹಣಕ್ಕೆ ರಸೀದಿ
Receipt No. 44120 Q. NO- 215/26-27 Book No. 682
Court of the 1st Addl. Civil Judge & JMFC BELLARY Date 6-7-26
Court No. CC 2051/26
From Whom Received Kubira
Kind of Payment
1. Duty
2. Penalty
3. Fine (Part or Full) Rs. 25000/-
4. Sale Money
Total Rs. 25000/-
Received Rs. 25000/- (In words) Rupees Twenty five thousand only
Signature or L.T.M. of the remitter — Nazir — Chief Ministerial Officer
Designation
Taken to Cash Book Folio No. Dated 6-7-26
Nazir or Cash Clerk — Chief Ministerial Officer


KLB-22
(Rule 21, Account Rules 1967)
RECEIPT FOR MONEY RECEIVED
ಸ್ವೀಕೃತಿ ಹಣಕ್ಕೆ ರಸೀದಿ
Receipt No. 44120 Q. NO- 215/26-27 Book No. 682
Court of the 1st Addl. Civil Judge & JMFC BELLARY Date 6-7-26
Court No. CC 2051/26
From Whom Received Kubira
Kind of Payment
1. Duty
2. Penalty
3. Fine (Part or Full) Rs. 25000/-
4. Sale Money
Total Rs. 25000/-
Received Rs. 25000/- (In words) Rupees Twenty five thousand only
Signature or L.T.M. of the remitter — Nazir — Chief Ministerial Officer
Designation
Taken to Cash Book Folio No. Dated 6-7-26
Nazir or Cash Clerk — Chief Ministerial Officer

ದಾಖಲಿಸಿದ್ದರು. ಇದರ ಪರಿಣಾಮ ಇಬ್ಬರು ಅಪ್ರಾಪ್ತ ಬಾಲಕರಿಗೆ ದ್ವಿಚಕ್ರ ವಾಹನ ನೀಡಿದ ವಾಹನಗಳ ಮಾಲೀಕರಾದ ಮಲ್ಲಿಕಾರ್ಜುನ ಮತ್ತು ಕುಬೇರ ಎನ್ನುವವರಿಗೆ ಬಳ್ಳಾರಿಯ ಒಂದನೇ ಅಡಿಷನಲ್ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ತಲಾ 25 ಸಾವಿರ ರೂಗಳ ದಂಡವನ್ನು ವಿಧಿಸಿದೆ.

ಮಕ್ಕಳಿಗೆ ವಾಹನಗಳನ್ನು ನೀಡುವ ಮುನ್ನ ಪಾಲಕರು ಎಚ್ಚರಿಕೆ ವಹಿಸುವುದು ಸೂಕ್ತವಾಗಿದೆ ಪೋಷಕರು ಹಾಗೂ ಪಾಲಕರು ಅಪ್ರಾಪ್ತ ಮಕ್ಕಳಿಗೆ ವಾಹನಗಳನ್ನು ನೀಡುವ ಮುನ್ನ ಹತ್ತು ಸಲ ಯೋಸಿಚಬೇಕು. ಯಾಕೆಂದರೆ ಅಕಸ್ಮಾತ್ ಅಪಘಾತ ಸಂಭವಿಸಿದರೆ ಜೀವಕ್ಕೇ ಅಪಾಯ ಎನ್ನುವುದನ್ನು ಅರಿಯುವುದರ ಜೊತೆಗೆ ಸಾವಿರಾರು ರೂಗಳನ್ನು ದಂಡ ಕಟ್ಟಬೇಕಾಗುತ್ತದೆ, ಈ ಹಿನ್ನೆಲೆಯಲ್ಲಿ ಪಾಲಕರು ಹಾಗೂ ಪೋಷಕರು ಅಪ್ರಾಪ್ತರಿಗೆ ತಮ್ಮ ವಾಹನಗಳನ್ನು ನೀಡುವ ಮುನ್ನ

## ಸಾಹಿತ್ಯ ಸಿಂಚನ

### ಗೆಲುವು

ಗೆಲುವು ಎನ್ನುವುದು ಗುರಿಯ ಬೆಳಕು,
ಪ್ರಯತ್ನವೇ ಅದರ ಮೊದಲ ಹೆಜ್ಜೆ.
ಸೋಲು ಬಂದರೂ ಕುಗ್ಗದ ಮನ,
ಧೈರ್ಯವೇ ಯಶಸ್ಸಿನ ನಿಜವಾದ ಬಲ.

ಬೆವರಿನ ಹನಿಯೇ ವಿಜಯದ ಮುತ್ತು,
ಶ್ರಮದ ಫಲವೇ ಗೆಲುವಿನ ಸಿಹಿ.
ಕನಸು ಕಂಡವನು ಮುಂದೆ ಸಾಗುವನು,
ಕೈಚೆಲ್ಲದವನು ಶಿಖರ ಮುಟ್ಟುವನು.

ಆತ್ಮವಿಶ್ವಾಸವೇ ಗೆಲುವಿನ ಆಯುಧ,
ಸಹನೆಯೇ ಸಾಧನೆಯ ದಾರಿ.
ಸತ್ಯದ ಹಾದಿಯಲ್ಲಿ ನಡೆದ ಹೆಜ್ಜೆ,
ಯಶಸ್ಸಿನ ಗಮ್ಯವನ್ನು ತಲುಪುವುದು.

ಅಡೆತಡೆಗಳು ಬಂದರೂ ಹೆದರಬೇಡ,
ಆಶೆಯ ದೀಪವನ್ನು ಆರಿಸಬೇಡ.
ನಂಬಿಕೆ ಇದ್ದರೆ ದಾರಿ ಮೂಡುವುದು,
ನಿರಂತರ ಶ್ರಮದಿಂದ ಜಯ ಸಿಗುವುದು.

ಗೆಲುವು ಹಣದಲ್ಲಲ್ಲ, ಮನಸ್ಸಿನಲ್ಲಿ ಇದೆ,
ಒಳ್ಳೆಯ ಗುಣದಲ್ಲೇ ನಿಜವಾದ ವೈಭವವಿದೆ.
ಜೀವನದ ಪ್ರತೀ ಹೆಜ್ಜೆಯೂ ಪಾಠವಾಗಲಿ,
ಗೆಲುವಿನ ಕಿರೀಟವು ನಿನ್ನದಾಗಲಿ.

–ಶ್ರೀಮತಿ ಕವಿತಾ ಹಿರೇಮಠ್

## ಸರ್ಕಾರಿ ಶಾಲೆ ಡೆಮಾಲಿಶ್ ಮಾಡಿದವರ ವಿರುದ್ಧ ಪ್ರಕರಣ ದಾಖಲಿಸದ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ ವಿಶ್ವನಾಥ್ ಬಲ್ಲಿದವ್

o ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ದೇವದುರ್ಗ ತಾಲೂಕಿನ ಮಸರಕಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕ ಹೊನ್ನಕುಣಿ ಗ್ರಾಮದಲ್ಲಿ ಸರ್ಕಾರಿ ಶಾಲೆಯ ಹಳೆಯ ಕಟ್ಟಡವನ್ನು ನಿಯಮಬಾಹಿರವಾಗಿ ಡೆಮಾಲಿಶ್ ಮಾಡಿದ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಇದುವರೆಗೆ ಪ್ರಕರಣ ದಾಖಲಿಸದಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಭೀಮ್ ಆರ್ಮಿ ತಾಲೂಕು ಅಧ್ಯಕ್ಷ ವಿಶ್ವನಾಥ್ ಬಲ್ಲಿದವ್ ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿದರು.**

ದೂರಿನ ಪ್ರಕಾರ, ಸರ್ವೇ ನಂ. 54/1/2ರ ಪಹಣಿಯಲ್ಲಿ ಸದರಿ ಜಮೀನು ಕರ್ನಾಟಕ ಸರ್ಕಾರದ ಹೆಸರಿನಲ್ಲಿ ದಾಖಲಾಗಿದ್ದು, ಸುಮಾರು 40 ವರ್ಷಗಳ ಕಾಲ ಅಲ್ಲಿ ಸರ್ಕಾರಿ ಶಾಲೆ ಕಾರ್ಯನಿರ್ವಹಿಸುತ್ತಿತ್ತು. ನಂತರ ಹೊಸ ಕಟ್ಟಡ ನಿರ್ಮಾಣವಾದ ಹಿನ್ನೆಲೆಯಲ್ಲಿ ಶಾಲೆಯನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸಲಾಗಿತ್ತು.



ಈ ನಡುವೆ, ಹಳೆಯ ಶಿಥಿಲಗೊಂಡ ಶಾಲೆಯ ಕಟ್ಟಡವನ್ನು ಕೆಲ ಖಾಸಗಿ ವ್ಯಕ್ತಿಗಳು ತಮ್ಮ ಜಮೀನು ಎಂದು ಹೇಳಿಕೊಂಡು, ಸಂಬಂಧಪಟ್ಟ ಇಲಾಖೆಗೆ ಮಾಹಿತಿ ನೀಡದೆ ಸಂಜೆ ವೇಳೆ ಜೆಸಿಬಿ ಯಂತ್ರದ ಮೂಲಕ ಅನಧಿಕೃತವಾಗಿ ಡೆಮಾಲಿಶ್ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಈ ಕುರಿತು 2026ರ ಜುಲೈ 1ರಂದು ತಾಲೂಕು ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿತ್ತು. ನಂತರ ತಹಶೀಲ್ದಾರರು ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿ, ಸಿಆರ್‌ಪಿ, ಆರ್‌ಐ ಹಾಗೂ ಗ್ರಾಮ ಆಡಳಿತಾಧಿಕಾರಿಗಳಿಗೆ ಪ್ರಕರಣ ದಾಖಲಿಸುವಂತೆ ಸೂಚಿಸಿದ್ದರೂ, ಅಧಿಕಾರಿಗಳು ವಿಳಂಬ ಧೋರಣೆ ಅನುಸರಿಸಿದ್ದಾರೆ ಎಂದು ವಿಶ್ವನಾಥ್ ಬಲ್ಲಿದವ್ ದೂರಿನಲ್ಲಿ ತಿಳಿಸಿದ್ದಾರೆ.

ಇದಲ್ಲದೆ, ಮಸರಕಲ್ ಗ್ರಾಮ ಪಂಚಾಯಿತಿಯ ಪಿಡಿಒ ಅವರು ಸ್ಥಳ ಪರಿಶೀಲನೆ ನಡೆಸಿ, ಸ್ಥಳೀಯ ನಿವಾಸಿಗಳ ಹೇಳಿಕೆಗಳನ್ನು ಸಂಗ್ರಹಿಸಿದ್ದು, ಆ ಸ್ಥಳದಲ್ಲಿ ಸರ್ಕಾರಿ ಶಾಲೆ ಇದ್ದದ್ದು ನಿಜ ಎಂದು ಗ್ರಾಮಸ್ಥರು ಸಹಿ ಮೂಲಕ ದೃಢಪಡಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.ಸರ್ಕಾರಿ ಆಸ್ತಿಯನ್ನು ಅನಧಿಕೃತವಾಗಿ ಡೆಮಾಲಿಶ್ ಮಾಡಿದ ಖಾಸಗಿ ವ್ಯಕ್ತಿಗಳ ವಿರುದ್ಧ ಕೂಡಲೇ ಕ್ರಿಮಿನಲ್ ಪ್ರಕರಣ ದಾಖಲಿಸಿ, ಸಂಬಂಧಪಟ್ಟ ಸ್ಥಳವನ್ನು ಸರ್ಕಾರದ ಆಸ್ತಿಯೆಂದು ಗುರುತಿಸಿ ಹದ್ದುಬಸ್ತು ಮಾಡಬೇಕು. ಜೊತೆಗೆ, ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧವೂ ಸೂಕ್ತ ಶಿಸ್ತು ಕ್ರಮ ಜರುಗಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ನಾಗರಾಜ್, ಪವನ್ ಕುಮಾರ್, ಬಸವರಾಜ್, ರಮೇಶ್ (ಹೊನ್ನಕುಣಿ), ಶಾಂತಕುಮಾರ್, ಕರಿಯಪ್ಪ, ರಂಗಣ್ಣ, ಆಂಜನೇಯ ಸೇರಿದಂತೆ ಹೊನ್ನಕುಣಿ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಕಂಪ್ಲಿ ಕೋಟೆಯಲ್ಲಿ ಬರಿದಾದ ತುಂಗಭದ್ರೆಯ ನದಿ ಒಡಲು : ಜನ ಜಾನುವಾರುಗಳಿಗೆ ಸಂಕಷ್ಟ : ಅನ್ನದಾತರ ಚಿತ್ತ ಮಳೆಯತ್ತ

o ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಪ್ರತಿ ವರ್ಷದಂತಾಗಿದ್ದರೆ ಈ ಹೊತ್ತಿಗೆ ಕಂಪ್ಲಿ ಕೋಟೆಯಲ್ಲಿನ ತುಂಗಭದ್ರಾ ನದಿಯು ಮೈದುಂಬಿ ಹರಿಯುವುದರ ಜೊತೆಗೆ ನದಿ ಅಕ್ಕ ಪಕ್ಕದ ಜಮೀನುಗಳ ಹಸಿರಿನಿಂದ ಕಂಗೊಳಿಸಬೇಕಾಗಿತ್ತು.**

ಆದರೆ, ಮುಂಗಾರು ಪೂರ್ವ ಹಾಗೂ ಮುಂಗಾರು ಮಳೆಗಳು ಕೈಕೊಟ್ಟ ಹಿನ್ನೆಲೆಯಲ್ಲಿ ಜೀವನ ನಾಡಿ ತುಂಗಭದ್ರಾ ಜಲಾಶಯಕ್ಕೆ ನೀರಿನ ಹರಿವು ಇಲ್ಲದೇ ಇರುವುದರಿಂದ ನದಿಗೆ ನೀರು ಇಲ್ಲ. ಇತ್ತ ಕಂಪ್ಲಿ ಕೋಟೆಯಲ್ಲಿ ಹರಿದಿರುವ ತುಂಗಭದ್ರೆಯ ಒಡಲು ಬರಿದಾಗಿದ್ದು ಜನ ಜಾನುವಾರುಗಳು ಸಂಕಷ್ಟ ಪಡುವಂತಾಗಿದೆ. ಕಳೆದ ವರ್ಷ ಮುಂಗಾರು ಪೂರ್ವ ಹಾಗೂ ಮುಂಗಾರು ಮಳೆಗಳು ಉತ್ತಮವಾಗಿ ಸುರಿದಿದ್ದ–ರಿಂದ ಜೀವನ ನಾಡಿ ತುಂಗಭದ್ರಾ ಜಲಾಶಯಕ್ಕೆ ಉತ್ತಮವಾಗಿ ನೀರು ಬಂದಿದ್ದರಿಂದ ನದಿಗೂ ನೀರು ಬಿಟ್ಟಿದ್ದರಿಂದ ಕಂಪ್ಲಿ ಕೋಟೆಯಲ್ಲಿ ತುಂಗಭದ್ರೆ ಮೈದುಂಬಿ ಹರಿಯುತ್ತಿದ್ದಳು.

ಆದರೆ ಈ ವರ್ಷ ಮಳೆಯೂ ಇಲ್ಲ ನೀರು ಇಲ್ಲದೇ ಇರುವುದರಿಂದ ತುಂಗಭದ್ರೆಯ ಒಡಲು ಬರಿದಾಗಿದೆ. ಜೊತೆಗೆ ಬರಿದಾದ ನದಿಯ ಒಡಲಿನಲ್ಲಿ ಅಕ್ರಮ ಮರಳು ದಂಧೆ ವಿಪರೀತವಾಗಿ ನಡೆಯುತ್ತಿದ್ದು, ನದಿಯಲ್ಲಿ ಎಲ್ಲೆಂದರಲ್ಲಿ ಬೃಹತ್ ಕುಣಿಗಳೇ ಕಾಣುತ್ತಿದ್ದು, ನದಿಗೆ ಮೇಯಲು ಹೋದ ಜಾನುವಾರುಗಳು ಸಾವನ್ನಪ್ಪುತ್ತಿವೆ. ಕಳೆದ ವರ್ಷ ಜು.7ರ ಒತ್ತಿಗೆ ಜೀವನದಿ ತುಂಗಭದ್ರಾ ಜಲಾಶಯಕ್ಕೆ ಸುಮಾರು 55 ಸಾವಿರ ಕ್ಯೂಸೆಕ್ಸ್ ನೀರು ಹರಿದು ಬರುತ್ತಿತ್ತು.ನದಿಗೆ ಸುಮಾರು 61 ಸಾವಿರ ಕ್ಯೂಸೆಕ್ಸ್ ನೀರನ್ನು ಬಿಟ್ಟಿದ್ದರಿಂದ ಕಂಪ್ಲಿ ಕೋಟೆಯಲ್ಲಿ ತುಂಗಭದ್ರಾ ನದಿ ಮೈದುಂಬಿ ಹರಿಯುತ್ತಿತ್ತು. ಈ ವರ್ಷ ಕಂಪ್ಲಿ ಕೋಟೆಯಲ್ಲಿ ತುಂಗಭದ್ರಾ ನದಿ ಒಣಗಿ ಹೋಗಿದ್ದು, ಅಲ್ಲಲ್ಲಿ ಮಾತ್ರ ತಗ್ಗು ಪ್ರದೇಶದಲ್ಲಿ ಮಾತ್ರ ನೀರು ನಿಂತಿರುವುದು ಕಂಡು ಬರುತ್ತಿದ್ದು, ನದಿ ಪಾತ್ರದಲ್ಲಿ ಅಲ್ಲಲ್ಲಿ ಮಕ್ಕಳು ಕ್ರಿಕೆಟ್ ಮೈದಾನ ಮಾಡಿಕೊಂಡು ಕ್ರಿಕೆಟ್ ಆಡುವುದು ಕಂಡು ಬರುತ್ತಿದೆ.



ಇದೀಗ ತುಂಗಭದ್ರಾ ಜಲಾನಯನ ಪ್ರದೇಶದಲ್ಲಿ ವ್ಯಾಪಕವಾಗಿ ಮಳೆಯಾಗುತ್ತಿದ್ದು, ಜಾಲಶಯಕ್ಕೆ ಕಳೆದರೆಡು ದಿನಗಳಿಂದ ಒಳ ಹರಿವು ಆರಂಭವಾಗಿದ್ದು, ಜಲಾನಯನ ಪ್ರದೇಶದಲ್ಲಿ ಇನ್ನು ವ್ಯಾಪಕವಾಗಿ ಮಳೆಯಾದರೆ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರು ಬಂದು ಈ ತಿಂಗಳ ಅಂತ್ಯಕ್ಕೆ ಅಥ–’ವಾ ಆಗಷ್ಟ ತಿಂಗಳ ಆರಂಭದಲ್ಲಿಯಾದರೂ ನದಿಗೆ ನೀರು ಬರಬಹುದೆಂದು ಸಾರ್ವಜನಿಕರು, ರೈತರು ನಿರೀಕ್ಷಿಸುತ್ತಿದ್ದಾರೆ.

> **ಕಳೆದ ವರ್ಷದ ಮುಂಗಾರು ಹಂಗಾಮಿನಲ್ಲಿ ತುಂಗಭದ್ರಾ ಜಲಾಶಯದ ಮಡಿಲು ತುಂಬಿದ ಹಿನ್ನಲೆ ರೈತರು ಮೊದಲ ಬೆಳೆ ತೆಗೆದುಕೊಂಡಿದ್ದಾರೆ. ಆದರೆ, ನಂತರದಲ್ಲಿ ಕ್ರಸ್ಟ್ ಗೇಟ್ ದುರಸ್ಥಿಯಿಂದಾಗಿ ಹಿಂಗಾರಿನ ಬೇಸಿಗೆ ಬೆಳೆಗೆ ನೀರಿಲ್ಲದಂತಾಯಿತು. ಒಂದು ಬೆಳೆ ಇಲ್ಲದೇ, ರೈತರು ಕಂಗಾಲಾಗಿದ್ದಾರೆ. ಈಗ ಹೊಸ ಕ್ರಸ್ಟ್ ಗೇಟ್‌ಯಿಂದ ರೈತರ ಬದುಕಿಗೆ ದಾರಿಯಾಗಲಿದೆ ಎಂಬ ಆಶಾಭಾಸವನೆ ಇತ್ತು. ಆದರೆ, ಮುಂಗಾರು ಮಳೆಗಳು ಕೈಕೊಟ್ಟ ಪರಿಣಾಮ ಜಲಾಶಯದಲ್ಲಿ ನೀರು ಇಲ್ಲದೇ ಇರುವುದರಿಂದ ನದಿ ಬರಿದಾಗಿದೆ. ಇದರಿಂದ ರೈತರಲ್ಲಿ ಆತಂಕದ ಛಾಯೆ ಮೂಡಿದೆ. ಇನ್ನೂ ಮಳೆ ಬರುವ ಸಾಧ್ಯತೆಯ ಆಶಾಭಾವನೆಯಲ್ಲಿ ರೈತರಿದ್ದಾರೆ.**
>
> **ಬಿ. ಮಕುಬುಲ್ , ರೈತ, ಕೋಟೆ ಕಂಪ್ಲಿ .**

## ಶಾಶ್ವತ ನಿವಾಸ ಪ್ರಮಾಣಪತ್ರ ರಾಷ್ಟ್ರೀಯ ಭದ್ರತೆಗೆ ಆತಂಕ: ವೀರನಗೌಡ ಪಾಟೀಲ್

o ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಕರ್ನಾಟಕ ಸರ್ಕಾರ ಹೊರಡಿಸಿರುವ ಕರ್ನಾಟಕ ಶಾಶ್ವತ ನಿವಾಸ ಪ್ರಮಾಣಪತ್ರ (ಪಿಆರ್‌ಸಿ)?2026 ಅಧಿಸೂಚನೆಯು ಸಾಂವಿಧಾನಿಕ ಮೌಲ್ಯಗಳು ಹಾಗೂ ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಗಂಭೀರ ಆತಂಕಗಳಿಗೆ ಕಾರಣವಾಗಿದ್ದು, ಕೇಂದ್ರ ಗೃಹ ಸಚಿವಾಲಯ ತಕ್ಷಣ ಮಧ್ಯಪ್ರವೇಶಿಸಿ ಇದರ ಸಾಂವಿಧಾನಿಕ ಸಿಂಧುತ್ವವನ್ನು ಪರಿಶೀಲಿಸಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಪಾಟೀಲ್ ಲೆಕ್ಕಿಹಾಳ ಆಗ್ರಹಿಸಿದರು.**

ಪಟ್ಟಣದ ಬಿಜೆಪಿ ಪಕ್ಷದ ಕಾರ್ಯಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದ ಸಂವಿಧಾನವು ದೇಶದ ಎಲ್ಲ



ನಾಗರಿಕರಿಗೆ ಒಂದೇ ಪೌರತ್ವದ ವ್ಯವಸ್ಥೆಯನ್ನು ಕಲ್ಪಿಸಿದೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ "ಶಾಶ್ವತ ನಿವಾಸಿ" ಎಂಬ ಪ್ರತ್ಯೇಕ ವರ್ಗವನ್ನು ರಚಿಸುವ ಪ್ರಯತ್ನವು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದ್ದು, ಯಾವುದೇ ಸಾಂವಿಧಾನಿಕ ಅಥ–’ವಾ ಶಾಸನಬದ್ಧ ಅಧಿಕಾರವಿಲ್ಲದೆ ಈ ರೀತಿಯ ಪ್ರಮಾಣಪತ್ರ ವಿತರಿಸುವುದು ಪ್ರಶ್ನಾರ್ಹವಾಗಿದೆ ಎಂದು ಹೇಳಿದರು. ಅಲ್ಲದೆ, ಸಮರ್ಥ ಕೇಂದ್ರ ಸಂಸ್ಥೆಗಳ ಮೂಲಕ ಭಾರತೀಯ ಪೌರತ್ವದ ಸಮಗ್ರ ಪರಿಶೀಲನೆ ನಡೆಸದೇ ಕೇವಲ ಸ್ಥಳೀಯ ದಾಖಲೆಗಳ ಆಧಾರದ ಮೇಲೆ ಪ್ರಮಾಣಪತ್ರ ನೀಡಿದರೆ ಅಕ್ರಮ ವಲಸಿಗರು ಹಾಗೂ ವಿದೇಶಿ ಪ್ರಜೆಗಳು ಸಹ ಇದರ ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ಇದೆ. ಇದರಿಂದ ಸರ್ಕಾರಿ ಸೌಲಭ್ಯಗಳು, ಶಿಕ್ಷಣ, ಉದ್ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ದುರುಪಯೋಗವಾಗುವ ಅಪಾಯವಿದ್ದು, ರಾಷ್ಟ್ರೀಯ ಭದ್ರತೆ ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆಯಾಗಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ಕೇಂದ್ರ ಗೃಹ ಸಚಿವಾಲಯವು ಈ ಅಧಿಸೂಚನೆಯ ಸಾಂವಿಧಾನಿಕ ಮಾನ್ಯತೆ ಕುರಿತು ಸಮಗ್ರ ಪರಿಶೀಲನೆ ನಡೆಸಿ, ಆವರೆಗೆ ಅದರ ಅನುಷ್ಠಾನವನ್ನು ಸ್ಥಗಿತಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕು. ಅಧಿಸೂಚನೆ ಹೊರಡಿಸಲು ರಾಜ್ಯ ಸರ್ಕಾರಕ್ಕೆ ಇರುವ ಸಾಂವಿಧಾನಿಕ ಹಾಗೂ ಕಾನೂನುಬದ್ಧ ಅಧಿಕಾರದ ಕುರಿತು ವಿವರವಾದ ವರದಿ ಪಡೆದು, ಸಮಗ್ರ ಪೌರತ್ವ ಪರಿಶೀಲನೆಯಿಲ್ಲದೆ ಯಾವುದೇ ಶಾಶ್ವತ ನಿವಾಸ ಪ್ರಮಾಣಪತ್ರ ನೀಡದಂತೆ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮಾನ್ವಿ ಮಂಡಳಿ ಅಧ್ಯಕ್ಷ ವೀರಭದ್ರಗೌಡ ಭೋಗವತಿ, ಮುಖಂಡರಾದ ಮಾನಪ್ಪ ನಾಯಕ ಹಾಗೂ ಪ್ರಧಾನ ಕಾರ್ಯದರ್ಶಿ ಗುರುಸಿದ್ದಪ್ಪ ಕಣ್ಣೂರ ಉಪಸ್ಥಿತರಿದ್ದರು.

## ರಿಲಯನ್ಸ್ ಪ್ರೈವೇಟ್ ಐಟಿಐ ತಾಳಿಕೋಟಿಯಲ್ಲಿ ಜುಲೈ 13ರಂದು ಬೃಹತ್ ಕ್ಯಾಂಪಸ್ ಡ್ರೈವ್

o ನೈಜ್ಯ ದೆಸೆ ನ್ಯೂಸ್




**ತಾಳಿಕೋಟಿ, ಜು. 11: ರಿಲಯನ್ಸ್ ಪ್ರೈವೇಟ್ ಐಟಿಐ, ತಾಳಿಕೋಟಿ ವತಿಯಿಂದ Placement Keepers – People Pulse Pvt. Ltd. ಸಹಯೋಗದಲ್ಲಿ 2026ರ ಜುಲೈ 13, ಸೋಮವಾರ ಬೆಳಿಗ್ಗೆ 11:00 ಗಂಟೆಯಿಂದ ಬೃಹತ್ ಕ್ಯಾಂಪಸ್ ಡ್ರೈವ್ ಆಯೋಜಿಸಲಾಗಿದೆ.ಈ ಉದ್ಯೋಗ ಮೇಳದಲ್ಲಿ ಟಾಟಾ, ಕಿಯಾ ಮೋಟಾರ್ಸ್, ರಿವರ್ ಮೊಬಿಲಿಟಿ, ಟಾಫೆ (TAFE), ಟಿವಿಎಸ್ ಸೇರಿದಂತೆ ವಿವಿಧ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗುತ್ತಿದೆ.ಐಟಿಐ (ಎಲ್ಲಾ ಟ್ರೇಡ್‌ಗಳು) ಉತ್ತೀರ್ಣ ಅಭ್ಯರ್ಥಿಗಳು ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳು ಈ ಕ್ಯಾಂಪಸ್ ಡ್ರೈವ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರೊಡಕ್ಷನ್ ಆಪರೇಟರ್, ಹೆಲ್ಪರ್/ಅಪ್ರೆಂಟಿಸ್ ಟ್ರೈನಿ, ಎಲೆಕ್ಟ್ರಾನಿಕ್ಸ್ ಮೆಕಾನಿಕ್, ಅಸೆಂಬ್ಲಿ ಆಪರೇಟರ್ ಹಾಗೂ ಜೂನಿಯರ್ ಟೆಕ್ನೀಷಿಯನ್ ಹುದ್ದೆಗಳಲ್ಲಿ ಉದ್ಯೋಗ ನೀಡಲಾಗುತ್ತದೆ. ಮಾಸಿಕ □16,000 ರಿಂದ □20,000 ವೇತನದ ಜೊತೆಗೆ ಆಹಾರ, ಸಾರಿಗೆ ಹಾಗೂ ವಸತಿ ಸೌಲಭ್ಯ ಒದಗಿಸಲಾಗುತ್ತದೆ.ಈ ಕ್ಯಾಂಪಸ್ ಡ್ರೈವ್ ರಿಲಯನ್ಸ್ ಪ್ರೈವೇಟ್ ಐಟಿಐ ಕಾಲೇಜು, ತಾಳಿಕೋಟಿ ಆವರಣದಲ್ಲಿ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಅರ್ಹ ಅಭ್ಯರ್ಥಿಗಳು ಭಾಗವಹಿಸಿ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಸಂಸ್ಥೆಯ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: □ 8088580071, 6364915696, 9620306543, 9740432177.**

## ಚಿಕ್ಕ ವಯಸ್ಸಿನಲ್ಲಿ ದೊಡ್ಡ ಹೊಣೆಗಾರಿಕೆ:ಕು.ಬಸನಗೌಡ ಬಿರಾದಾರ್‌ಗೆ ಜಿಲ್ಲಾಧ್ಯಕ್ಷ ಪಟ್ಟ!

o ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಕರ್ನಾಟಕ ರಾಜ್ಯ ಪ್ರಗತಿಪರ ವಿದ್ಯಾರ್ಥಿ ಒಕ್ಕೂಟದಲ್ಲಿ ಮಹತ್ವದ ಬೆಳವಣಿಗೆ ಸಂಭವಿಸಿದೆ. ಸಂಘಟನೆಯ ಕಲಬುರಗಿ ಜಿಲ್ಲಾ ಘಟಕದ ನೂತನ ಅಧ್ಯಕ್ಷರಾಗಿ ಕು. ಬಸನಗೌಡ ಪ್ರವೀಣ್ ಬಿರಾದಾರ್ ಅವರನ್ನು ಆಯ್ಕೆ ಮಾಡಲಾಗಿದೆ.**

ತಾಳಿಕೋಟೆ ತಾಲೂಕಿನ ಬೇಕಿನಾಳ ಗ್ರಾಮದ ಡಾ. ಪ್ರವೀಣ ಬಿರಾದಾರ್ ಹಾಗೂ ಚಂದ್ರಕಲಾ ಪಿ. ಬಿರಾದಾರ್ ಅವರ ಪುತ್ರನಾದ ಬಸನಗೌಡ ಪಿ. ಬಿರಾದಾರ್, ಪ್ರಸ್ತುತ



ಕಲಬುರಗಿಯ ಪ್ರತಿಷ್ಠಿತ ಸರ್ವಜ್ಞ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಇಷ್ಟು ಚಿಕ್ಕ ವಯಸ್ಸಿನಲ್ಲಿ ಜಿಲ್ಲಾಮಟ್ಟದ ಹುದ್ದೆಗೆ ಆಯ್ಕೆಯಾಗಿರುವುದು ಗಮನಾರ್ಹವಾಗಿದೆ.

ಚಿಕ್ಕ ವಯಸ್ಸಿನಲ್ಲೇ ದೊಡ್ಡ ಹೊಣೆಗಾರಿಕೆ ಹೊತ್ತಿರುವ ಬಸನಗೌಡ ಬಿರಾದಾರ್ ಅವರ ಆಯ್ಕೆ ವಿದ್ಯಾರ್ಥಿ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದ್ದು, ಯುವಜನರಲ್ಲಿ ಹೊಸ ಉತ್ಸಾಹ ಮೂಡಿಸಿದೆ. ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗೆ ವಿದ್ಯಾರ್ಥಿಗಳ ಪಾತ್ರ ಮಹತ್ತರವಾಗಿದ್ದು, ಈ ದಿಕ್ಕಿನಲ್ಲಿ ಸಂಘಟನೆ ಇನ್ನಷ್ಟು ಚುರುಕಾಗಿ ಕಾರ್ಯನಿರ್ವಹಿಸಲಿದೆ ಎಂದು ಸಂಘದ ಮುಖಂಡರು ತಿಳಿಸಿದ್ದಾರೆ.

ರಾಜ್ಯ ಘಟಕದ ಅಧ್ಯಕ್ಷ ಕುಮಾರ ಸಾಗರ ಮಾತನಾಡಿ, “ವಿದ್ಯಾರ್ಥಿ ಸಂಘಟನೆಗಳ ಬಲವರ್ಧನೆ ಸಮಾಜದ ಅಭಿವೃದ್ಧಿಗೆ ದಾ–ರಿಯಾಗುತ್ತದೆ. ಬಸನಗೌಡ ಬಿರಾದಾರ್ ಅವರ ನೇತೃತ್ವದಲ್ಲಿ ಜಿಲ್ಲೆಯಲ್ಲಿ ಸಂಘಟನೆ ಹೊಸ ಚೈತನ್ಯ ಪಡೆದುಕೊಳ್ಳಲಿದೆ” ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಒಕ್ಕೂಟದ ಪದಾಧಿಕಾರಿಗಳು ಹಾಗೂ ಸದಸ್ಯರು ನೂತನ ಜಿಲ್ಲಾಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿ, ಭವಿಷ್ಯದಲ್ಲಿ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವಂತೆ ಶುಭಾಶಯ ಕೋರಿದರು. ಈ ಸಾಧನೆಗೆ ಶಾಲೆಯ ಸಂಸ್ಥಾಪಕರು, ಆಡಳಿತಾಧಿಕಾರಿಗಳು, ಸಿಬ್ಬಂದಿ ವರ್ಗ ಹಾಗೂ ಕುಟುಂಬಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಬಾಲ್ಯ ವಿವಾಹದ ಪರಿಣಾಮಗಳ ಕುರಿತು ಆರೋಗ್ಯ ಇಲಾಖೆಯಿಂದ ಜಾಗೃತಿ ಕಾರ್ಯಕ್ರಮ

o ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಜ್ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರ್ ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್,ಪ್ರಾಥಮಿಕ ಆರೋಗ್ಯ ಕೇಂದ್ರ ಖಿ. ಊ. ನಂ. 2, ಸರ್ಕಾರಿ ಪ್ರೌಢ ಶಾಲೆ ಇವರ ಸಂ–ಯುಕ್ತ ಆಶ್ರಯದಲ್ಲಿ ಆರೋಗ್ಯ ಇಲಾಖೆಯಿಂದ,**

R,H, NO. 3 ಕ್ಯಾಂಪ್ನಲ್ಲಿ ಬಾಲ್ಯ ವಿವಾಹದ ಕುರಿತು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಶ್ರೀಮತಿ ಗೀತಾ ಹಿರೇಮಠ್ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು ಇವರು ಮಾತನಾಡಿದರು ಬಾಲ್ಯ ವಿವಾಹವು ಅಪ್ರಾಪ್ತ ವಯಸ್ಸಿನ ಹುಡುಗಿಯರ ದಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ತೀವ್ರವಾದ ದುಷ್ಪ–ರಿಣಾಮಗಳನ್ನು ಬೀರುತ್ತದೆ ಇದು ಆರಂಭಿಕ ಗರ್ಭಧಾರಣೆ ಪೌಷ್ಟಿಕಾಂಶದ ಕೊರತೆ ತಾಯಿ ಮತ್ತು ಶಿಶು ಮರಣದ ಅಪಾಯ ಹಾಗೂ ಲೈಂಗಿಕ ಗಂಭೀರ ಸಮಸ್ಯೆಗಳಿಗೆ ಎಡೆ ಮಾಡಿಕೊಳ್ಳುತ್ತದೆ



ಬಾಲ್ಯ ವಿವಾಹದಿಂದ ಆರೋಗ್ಯದ ಮೇಲಾಗುವ ಪರಿಣಾಮಗಳ ಕುರಿತು ವಿದ್ಯಾರ್ಥಿನಿಯರಿಗೆ ಮಾಹಿತಿಯನ್ನು ನೀಡಲಾಯಿತು ಈ ಸಂದರ್ಭದಲ್ಲಿ ಆರಂಭಿಕ ಗರ್ಭಧಾರಣೆ ಅಪ್ರಾಪ್ತ ವಯಸ್ಸಿನ ಗರ್ಭಕೋಶ ಮತ್ತು ದೇಹವು ಸಂಪೂರ್ಣವಾಗಿ ಬೆಳೆದಿರುವುದಿಲ್ಲ ಇದು ಹೆರಿಗೆಯ ಸಮಯದಲ್ಲಿ ತೀವ್ರ ರಕ್ತಸ್ರಾವ ಹೆರಿಗೆ ನೋವಿನ ಸಮಸ್ಯೆಗಳು ಮತ್ತು ತಾಯಿ ಮಗುವಿನ ಜೀವಕ್ಕೆ ಅಪಾಯವನ್ನು ತಂದುಡುತ್ತದೆ ಮತ್ತು ಪೌಷ್ಟಿಕಾಂಶದ ಕೊರತೆ ಹದಿ ಹರಿಯದ ಹೆಣ್ಣು ಮಕ್ಕಳಿಗೆ ಸ್ವತಹ ಪೌಷ್ಟಿಕ ಆಹಾರದ ಅವಶ್ಯಕತೆ ಇರುತ್ತದೆ ರಕ್ತ ಹೀನತೆಯ ಮಾನಸಿಕ ಒತ್ತಡದ ಮತ್ತು ಖಿನ್ನತೆ ಒಳಗಾಗುವುದು ಮಗುವಿನ ಆರೋಗ್ಯದ ಮೇಲಿನ ಪರಿಣಾಮ ಮತ್ತು ಸಂತಾನೋತ್ಪತ್ತಿ ಸಮಸ್ಯೆಗಳು ಶಿಕ್ಷಣ ಮೊಟಕು ಮತ್ತು ಕಳಪೆ ಜೀವನ ಮಟ್ಟ ಸಾಗಿಸಬೇಕಾಗುತ್ತದೆ ಎಂದು ತಿಳಿಸಲಾಯಿತು.

ಬಾಲ್ಯ ವಿವಾಹದಿಂದಾಗಿ ಬಾಲಕಿಂ–ಯರ ಶಿಕ್ಷಣ ಮೊಟಕುಗೊಳ್ಳುತ್ತದೆ ಇದು ಅವರ ಸ್ವಾವಲಂಬನೆಗೆ ಅಡ್ಡಿಯಾಗಿ ಬಡತನ ಮತ್ತು ಕಳಪೆ ಜೀವನ ಮಟ್ಟಕ್ಕೆ ಕಾರಣವಾಗುತ್ತದೆ ತಮ್ಮ ಹಕ್ಕುಗಳ ಬಗ್ಗೆ ಅರಿವಿಲ್ಲದೆ ದೈಹಿಕ ಹಾಗೂ ಲೈಂಗಿಕ ಶೋಷಣೆಗೆ ಒಳಗಾಗುವ ಸಾಧ್ಯತೆಗಳು ಹೆಚ್ಚು ಇದು ಹೆಚ್‌ಐವಿ ಸೇರಿದಂತೆ ಲೈಂಗಿಕ ಕಾಯಿಲೆಗಳ ಸೋಂಕಿಗೆ ಕಾರಣವಾಗಬಹುದು ಬಾಲ್ಯ ವಿವಾಹದಿಂದ ಹುಟ್ಟುವ ಮಕ್ಕಳು ಸಾಮಾನ್ಯವಾಗಿ ಕಡಿಮೆ ತೂಕವನ್ನು ಹೊಂದಿರುತ್ತಾರೆ ಅಲ್ಲದೆ, ಶಿಶು ಮರಣ ಮತ್ತು ಮತ್ತು ಅಪೌಷ್ಟಿಕತೆಯ ಸಮಸ್ಯೆಗಳು ಈ ಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ ದೈಹಿಕ ಹಾಗೂ ಮಾನಸಿಕವಾಗಿ ಮದುವೆ ಮತ್ತು ಸಂಸಾರದ ಜವಾಬ್ದಾರಿಗಳನ್ನು ಬರಲು ಸಿದ್ಧ–ರಿರದ ಅಪ್ರಾಪ್ತ ವಯಸ್ಸಿನವರು ತೀವ್ರ ಮಾನಸಿಕ ಒತ್ತಡ ಆತಂಕ ಮತ್ತು ಖಿನ್ನತೆಗೆ ಒಳಗಾಗುತ್ತಾರೆ ಹದಿಹರೆಯದ ಹೆಣ್ಣು ಮಕ್ಕಳಿಗೆ ಸ್ವತಹ ಪೌಷ್ಟಿಕ ಆಹಾರದ ಅವಶ್ಯಕತೆ ಇರುತ್ತದೆ ಇಂತಹ ವಯಸ್ಸಿನಲ್ಲಿ ಗರ್ಭಧಾರಣೆಯಾದರೆ ರಕ್ತ ಹೀನತೆ ಮತ್ತು ಅಪೌಷ್ಟಿಕತೆಯ ಸಮಸ್ಯೆಗಳು ಕಂಡುಬರುತ್ತವೆ,HPV ಲಸಿಕೆಯು ಗರ್ಭಕಂಠದ ಕ್ಯಾನ್ಸರ್ ಮತ್ತು ಇತರೆ ಮಾರಣಾಂತಿಕ ಕಾಯಿಲೆಗಳಿಗೆ ಕಾರಣವಾಗುವ ವೈರಸ್ ನಿಂದ ರಕ್ಷಣೆ ನೀಡುತ್ತದೆ ಇದು 9 ವರ್ಷದಿಂದ 45 ವರ್ಷದವರಿಗೆ ಲಭ್ಯ ಇದು ಭಾರತದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಭ್ಯವಿದೆ 9ರಿಂದ 14 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಈ ಲಸಿಕೆಯನ್ನು ವಿಶೇಷವಾಗಿ ಶಿಫಾರಸ್ಸು ಮಾಡಲಾಗಿದೆ ಇದರ ನಂತರ ವಯಸ್ಸಿನವರಿಗೆ ತಮ್ಮ ವೈದ್ಯರ ಸಲಹೆ ಮೇರೆಗೆ ಪಡೆಯಬಹುದು 15 ವರ್ಷಕ್ಕಿಂತ ಮುಂಚೆ ಲಸಿಕೆ ಹಾಕಿಸಿದರೆ ಎರಡು ರೋಜ್ಗಳು ಸಾಕು 15 ವರ್ಷದ ನಂತರ ಮೊದಲ ಡಸ್ ಪಡೆದರೆ ಮೂರು ಡೋಸ್ ಗಳು ಬೇಕಾಗುತ್ತವೆ ಉಚಿತ ಲಸಿಕೆ ಅಭಿಯಾನದಲ್ಲಿ ಭಾರತ ಸರ್ಕಾರ ಗರ್ಭಕಂಠ ಕ್ಯಾನ್ಸರ್ ತಡೆಗಟ್ಟಲು 14 ವರ್ಷದ ಹೆಣ್ಣು ಮಕ್ಕಳಿಗೆ ಉಚಿತ ಎಚ್ ಪಿ ಲಸಿಕೆ ನೀಡುವ ಅಭಿಯಾನವನ್ನು ಜಾರಿಗೆ ತಂದಿದೆ ಹೆಚ್ಚಿನ ಜನರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ನಂತರ ರಾಮಾಂಜನೇಯ ಆರ್ ಕೆ ಎಸ್ ಕೆ ಕೌನ್ಸಿಲರ್ ಮಾತನಾಡಿ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಭಾವನಾತ್ಮಕ ದೃಷ್ಟಿಕೋನಗಳ ಸದೃಢತೆ ಕುರಿತು ಮಾದಕ ವಸ್ತುಗಳ ವೇಸನದ ಪರಿಣಾಮಗಳ ಜೊತೆಗೆ ವೈಯಕ್ತಿಕ ಶುಚಿತ್ವದ ಕುರಿತು ಮಾಹಿತಿ ನೀಡಿದರು ಈ ಸಂದರ್ಭದಲ್ಲಿ ಸರಸ್ವತಿ ಕಊಅಔ, ರೇಖಾ ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರಾದ ಮಹಮ್ಮದ್ ಶಾಹಿದ್, ಅಮರೇಶ್, ಹನ್ಮಂತಪ್ಪ, ಶಶಿಧರ್, ಸವಿತಾ, ಅಮರೇಶ್, ಮೀನಾಕ್ಷಿ, ಶಿಕ್ಷಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## KRIES ನೇಮಕಾತಿ 2026 – 1087 ಶಿಕ್ಷಕರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ 11 ಜುಲೈ 2026

KRIES ನೇಮಕಾತಿ 2026: 1087 ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ (KRIES) ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದ ಇಲಾಖೆಯಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 13–ಆಗಸ್ಟ್–2026 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: cetonline.karnataka.gov.in

## ಮಾದಕ ವಸ್ತುಗಳಿಂದ ದೂರವಿರಿ,ಸದೃಢ ಆರೋಗ್ಯ ರೂಪಿಸಿಕೊಳ್ಳಿ:ಚಂದ್ರಶೇಖರ ನಾಯಕ ಡಿ ಎಸ್ ಪಿ

O ನೈಜ್ಯ ದೆಸೆ ನ್ಯೂಸ್


**ಹಾಲಾಪೂರ: ಗ್ರಾಮದಲ್ಲಿರುವ ಸರಕಾರಿ ಪ್ರೌಢ ಶಾಲೆಯಲ್ಲಿ ಅಂತರಾಷ್ಟ್ರೀಯ ಮಾದಕ ವಸ್ತುಗಳ ವಿರೋಧಿ ದಿನದ ಅಂಗವಾಗಿ ಡಿ ಎಸ್ ಪಿ ಚಂದ್ರಶೇಖರ ನಾಯಕ ವಿದ್ಯಾರ್ಥಿಗಳೊಂದಿಗೆ ಭಾಗವಹಿಸಿ ಮಾತನಾಡಿ ಪ್ರತಿವರ್ಷ ಜೂನ್ 26 ರಂದು ಅಂತರಾಷ್ಟ್ರೀಯ ಮಾದಕ ವಸ್ತುಗಳ ವಿರೋಧಿ ದಿನವನ್ನಾಗಿ ಆಚರಿಸುತ್ತವೆ.**



ಇತ್ತೀಚಿನ ದಿನಗಳಲ್ಲಿ ಮಾದಕ ವಸ್ತುಗಳ ಹಾವಳಿಯಿಂದ ಯುವಕರು ಚಿಕ್ಕ ವಯಸ್ಸಿನಲ್ಲೇ ಅನೇಕ ಕೆಟ್ಟ ಚಟಗಳಿಗೆ ಬಲಿಯಾಗುತ್ತಿದ್ದು ಅದರಿಂದ ಸಮಾಜ–ಕ್ಕೆ ಮತ್ತು ಕುಟುಂಬಕ್ಕೆ ದೊಡ್ಡ ಆಘಾತವಾಗಿದ್ದು, ಅದಕ್ಕೆ ಪ್ರತಿವರ್ಷ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಉತ್ತಮ ಸಂದೇಶವನ್ನು ಕೊಡುವುದಕ್ಕಾಗಿ ಈ ಒಂದು ಕಾರ್ಯಕ್ರಮವನ್ನು ಮಾಡುತ್ತಿದ್ದು ಅದಕ್ಕೆ ನೀವು ಮಾದಕ ವಸ್ತುಗಳಿಂದ ದೂರವಿರಿ,ಇದರಿಂದ ಹಾನಿಗಳೆಂದರೆ ಆರೋಗ್ಯ ಹಾನಿ,ಮಾನಸಿಕ ಖಿನ್ನತೆ ,ಸಾಮಾಜಿ–ಕ ಹಿನ್ನಡೆ ಹೀಗೆ ಅನೇಕ ಸಮಸ್ಯೆಗಳಿಂದ ಇಡಿ ಜೀವನವೇ ಬಲಿಪಶುವಾಗುತ್ತದೆ. ಅದಕ್ಕೆ ಅವುಗಳಿಂದ ದೂರವಿದ್ದು ಉತ್ತಮ ನಾಗರಿಕರಾಗಿ ಜೀವನ ಸಾಗಿಸಿ ಎಂದು ಹೇಳಿದರು. ಈ ವೇಳೆಯಲ್ಲಿ ಪಿಎಸ್‌ಐ ಗುರುಚಂದ್ರ ಯಾದವ, ಮುಖ್ಯಗುರು ಸುಭಾಷ್ ಸಿಂಗ್ ಹಾಗೂ ಶಿಕ್ಷಕವೃಂದದವರು ಇದ್ದರು.

## ಮಸ್ಕಿ,ಜುಲೈ ,13 ರಂದು 'ಸ್ವಾತಂತ್ರ್ಯದ ಓಟ' ನಾಟಕ ಪ್ರದರ್ಶನ

O ನೈಜ್ಯ ದೆಸೆ ನ್ಯೂಸ್



**ಮಸ್ಕಿ: ಶಿವಮೊಗ್ಗ ರಂಗಾಯಣದರು ಮತ್ತು ಕನ್ನಡ ಸಾಹಿತ್ಯ ಪರಿಷತ್ ಮಸ್ಕಿ, ಪ್ರತಾಪ್ ಗೌಡ ಫೌಂಡೇಶನ್ , ತಾಲೂಕು ಪ್ರೌಢಶಾಲಾ ಶಿಕ್ಷಕರ ಸಂಘ ಹಾಗೂ ಸರ್ಕಾರಿ ನೌಕರ ಸಂಘ ಮಸ್ಕಿ ಸಂಯುಕ್ತಾಶ್ರಯದಲ್ಲಿ. "ಸ್ವಾತಂತ್ರ್ಯದ ಓಟ ನಾಟಕ ಪ್ರದರ್ಶನವು ಜುಲೈ .13ರಂದು ಸೋಮವಾರ ಸಂಜೆ 6.30 ಗಂಟೆಗೆ ಮಸ್ಕಿ ಪಟ್ಟಣದ ಭ್ರಮರಾಂಬ ಕಲ್ಯಾಣ ಮಂಟಪದಲ್ಲಿ ಪ್ರದರ್ಶನಗೊಳ್ಳಲಿದೆ ಎಂದು ಶ್ರೀಮತಿ ವಿದ್ಯಾವತಿ ವನಕಿ, ಕನ್ನಡ ಸಾಹಿತ್ಯ ಪರಿಷತ್ ತಾಲೂಕ ಅಧ್ಯಕ್ಷರು ಮಸ್ಕಿ ಅವರು ತಿಳಿಸಿದ್ದಾರೆ.ಶಿವಮೊಗ್ಗ ರಂಗಾಯಣದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಬೊಳುವಾರ ಮಹಮ್ಮದ್ ಕುಂಞ ಅವರ ಕಾದಂಬರಿಯ ರಂಗರೂಪ, ನಟರಾಜ್ ಹೊನ್ನವಳ್ಳಿ ಅವರ ನಿರ್ದೇಶನದ ರಾಘವ ಕಮ್ಮಾರ ಇವರ ಸಂಗೀತದ, ರಂಗಾಯಣ, ಶಿವಮೊಗ್ಗ ಪ್ರಸ್ತುತಿಯ ಈ ನಾಟಕ ಪ್ರದರ್ಶನಕ್ಕೆ ಸಾರ್ವಜನಕರಿಗೆ ಪ್ರವೇಶ ಉಚಿತವಿದ್ದು, ರಂಗಾಸಕ್ತರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ನಾಟಕ ವೀಕ್ಷಿಸಬೇಕೆಂದು ಅವರು ತಿಳಿಸಿದ್ದಾರೆ.**

## ಸಿಂಧನೂರು ಎನ್.ಜಿಓ ಕಾಲೋನಿಯಲ್ಲಿ ಚರಂಡಿ ಮತ್ತು ಸಿಸಿ, ರಸ್ತೆ ವ್ಯವಸ್ಥೆಯಿಲ್ಲ ನಿವಾಸಿಗರ ಆರೋಪ!

O ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಕುಷ್ಟಗಿ ರಸ್ತೆಯಲ್ಲಿನ ಕರೆಯಪ್ಪ ಲೇಔಟ್ ಕಡೆಗೆ ಹೋಗುವ ದಾರಿಯ ಎಡಗಡೆಯಿರುವ ಎನ್.ಜಿಓ ಕಾಲೋನಿಯಲ್ಲಿ ಈಗಾಗಲೇ ಅನೇಕರು ಮನೆಗಳನ್ನು ಕಟ್ಟಿಸಿ ವಾಸಮಾಡುತ್ತಿದ್ದು, 8 ರಿಂದ 10 ವರ್ಷಗಳೇ ಕಳೆಯುತ್ತಾ ಬಂದರೂ ಸಹ, ಇಲ್ಲಿ ಒಂದು ಚರಂಡಿ ವ್ಯವಸ್ಥೆಯಿಲ್ಲ, ಸಿಸಿ ರಸ್ತೆ ವ್ಯವಸ್ಥೆಯಿಲ್ಲ, ಮಳೆ ಬಂದರೆ ಸಾಕು,**

ಮನೆಗಳ ಸುತ್ತಮುತ್ತಲಿನಲ್ಲಿ ನೀರು ನಿಂತು, ವಿಪರೀತ ಸೊಳ್ಳೆಗಳು ಹಾಗೂ ವಿಷಪೂರಿತ ಜಂತುಗಳಾದ ಹಾವು, ಚೇಳುಗಳು ಬರುತ್ತಿವೆ. ಇದರ ಜೊತೆಗೆ ಬಹಳಷ್ಟು ಮಕ್ಕಳು ವಿದ್ಯಾಭ್ಯಾಸ ಮಾಡುವ ಅಂಬಾದೇವಿ ಶಾಲೆಯಿದೆ. ಹೀಗಾಗಿ ಮನೆಗಳ ಮಲೀನ ನೀರು, ಹಾಗೂ ಮಳೆಯ ನೀರು, ನಿಲ್ಲದಂತೆ ಚರಂಡಿ ವ್ಯವಸ್ಥೆ ಮಾಡಬೇಕೆಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಪಂಪಯ್ಯಸ್ವಾಮಿ ಸಾಲಿಮಠ ಹಾಗೂ ಕಾಲೋನಿಯ ಸ್ಥಳೀಯರಾದ ರಾಜಕುಮಾರ ಸಂಬಂಧಪಟ್ಟಂತಹ



ಅಧಿಕಾರಿಗಳಿಗೆ ಮನವಿ ಮಾಡಿಕೊಂಡರು.

ದಿನ ಕ್ರಿಮಿಕೀಟಗಳ ಭಯದಲ್ಲೇ ಕಾಲೋನಿಯಲ್ಲಿ ವಾಸಿಸುವ ನಿವಾಸಿಗಳು ಮತ್ತು ಶಾಲೆಯ ಮಕ್ಕಳು ಇರುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕಾರಣವಾಗಿ ನಗರಸಭೆ ಪೌರಾಯುಕ್ತರು, ಸಿಬ್ಬಂದಿಗಳು, ಸದಸ್ಯರು, ಹಾಗೂ ಎಂ.ಎಲ್.ಎ ಮತ್ತು ಎಂಎಲ್ಸಿ ಅವರಲ್ಲಿ ಮಾನವಿ ಮಾಡಿ ಮಾತನಾಡಿದರು. ಮನೆಗಳು ಕಟ್ಟಲು ಅನುಮತಿಕೊಟ್ಟು, ಟ್ಯಾಕ್ಸ್ ಕಟ್ಟಿಸಿಕೊಂಡು, ನಿವಾಸಿಗರ ಹಿತ ಬಯಸದೇ ಇರುವುದು ಸರಿಯಾದ ಕ್ರಮವಲ್ಲ, ಮನೆಗಳ ಮುಂದಿರುವ ರಸ್ತೆ ಸಂಪೂರ್ಣ ಬಂದ್ ಆಗಿ ಕಸ, ಕಡ್ಡಿ, ಮೇವು, ಜಾಲಿಗಿಡಗಳು, ಬೆಳೆದು ನಿಂತಿವೆ



ಜೊತೆಗೆ ವಿಷಪೂರಿತ ವಿಷಜಂತುಗಳು ಬರುತ್ತಿವೆ.

ಮಳೆಗಾಲದಲ್ಲಿ ಕನಿಷ್ಠವೆಂದರೂ 4 ರಿಂದ 5 ತಿಂಗಳ ಕಾಲ ನೀರು ನಿಂತು, ವಿಪರೀತ ಸೊಳ್ಳೆಗಳು, ಹಾವು, ಚೇಳುಗಳು, ಬರುವುದು ಸಹಜ. ಈ ಕಾರಣವಾಗಿ ಸಂಬಂಧಪಟ್ಟ ಅಧಿಕಾರಿಗಳು ಕುಷ್ಟಗಿ ರಸ್ತೆಯಲ್ಲಿನ ಎನ್.ಜಿಓ ಕಾಲೋನಿಯ ಕಡೆಗೆ ಗಮನಕೊಟ್ಟು ಚರಂಡಿ ವ್ಯವಸ್ಥೆ ಹಾಗೂ ಸಿಸಿ ರಸ್ತೆ ವ್ಯವಸ್ಥೆ ಮತ್ತು ಸುತ್ತಮುತ್ತ ನೀರು ನಿಲ್ಲುವುದನ್ನು ತಡೆಗಟ್ಟಲು ನಗರಸಭೆ ಅಧಿಕಾರಿಗಳಲ್ಲಿ ಎಂ.ಎಲ್.ಎ, ಹಾಗೂ ಎಂಎಲ್ಸಿಯವರಲ್ಲಿ ಮನವಿ ಮಾಡಿಕೊಂಡರು.

## ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ಕೆ ವೇಗ: ವಾರ್ಡ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಪಾಲಿಕೆ ಆಯುಕ್ತ ಜುಬಿನ್ ಮೋಹಪಾತ್ರ

O ನೈಜ್ಯ ದೆಸೆ ನ್ಯೂಸ್

**ರಾಯಚೂರು, ಜುಲೈ 11: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ನಡೆಯುತ್ತಿರುವ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (Special Intensive Revision?SIR) ಕಾರ್ಯದ ಹಿನ್ನೆಲೆಯಲ್ಲಿ ರಾಯಚೂರು ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀ ಜುಬಿನ್ ಮೋಹಪಾತ್ರ ಅವರು ನಗರದ ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿ ಪರಿಷ್ಕರಣೆ ಕಾರ್ಯದ ಪ್ರಗತಿಯನ್ನು ಸ್ಥಳದಲ್ಲೇ ಪರಿಶೀಲಿಸಿದರು.**

ಇಂದು ನಗರದ ಬೆರೂನ್ ಕಿಲ್ಲಾ, ಅಂ–ದ್ರೂನ್ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಪ್ರದೇಶಗಳಿಗೆ ಭೇಟಿ ನೀಡಿದ ಆಯುಕ್ತರು, ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸುತ್ತಿದ್ದ ಬೂತ್ ಮಟ್ಟದ ಅಧಿಕಾರಿಗಳ (ಬಿಎಲ್ಒ) ಕಾರ್ಯವೈಖ–ರಿಯನ್ನು ಅವಲೋಕಿಸಿದರು. ಮತದಾರರಿಂದ ಅಗತ್ಯ ದಾಖಲೆಗಳನ್ನು ಪಡೆದು ಮಾಹಿತಿಯನ್ನು ನಿಖರವಾಗಿ ದಾಖಲಿಸಲಾಗುತ್ತಿದೆಯೇ, ಹೊಸ ಮತದಾರರ ಹೆಸರು ಸೇರ್ಪಡೆ, ಮರಣ ಹೊಂದಿದ ಹಾಗೂ ಸ್ಥಳಾಂತರಗೊಂಡ ಮತದಾರರ ವಿವರಗಳ ಪರಿಷ್ಕರಣೆ ಸೇರಿದಂತೆ ವಿವಿಧ ಅಂಶಗಳ ಕು–



ರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಅಧಿಕಾ–ರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ ಅವರು, ಪರಿಷ್ಕರಣೆ ಕಾರ್ಯದಲ್ಲಿ ಯಾವುದೇ ರೀತಿಯ ವಿಳಂಬ, ನಿರ್ಲಕ್ಷ್ಯ ಅಥವಾ ಲೋಪದೋಷಗಳಿಗೆ ಅವಕಾಶ ನೀಡಬಾರದು ಎಂದು ತಿಳಿಸಿದರು. ಪ್ರತಿಯೊಬ್ಬ ಅರ್ಹ ಮತದಾರರ ಮಾಹಿತಿಯನ್ನು ಪರಿಶೀಲಿಸಿ, ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ನಿಗದಿತ ಅವಧಿಯೊಳಗೆ ಕಾರ್ಯವನ್ನು ಗುಣಮಟ್ಟದೊಂದಿಗೆ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಿದರು. ಮನೆ ಮನೆಗೆ ಭೇಟಿ ನೀಡುವ ವೇಳೆ ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಿ, ಮತದಾರರಿಗೆ ಪರಿಷ್ಕರಣೆ ಕಾರ್ಯದ ಉದ್ದೇಶವನ್ನು ಮನವರಿಕೆ ಮಾಡಿಕೊಡಬೇಕು ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸುವ ಕುರಿತು ಸ್ಪಷ್ಟ ಮಾಹಿತಿ ನೀಡಬೇಕು ಎಂದು ಸೂಚಿಸಿದರು.

ಸಾರ್ವಜನಿಕರ ಸಹಕಾರದಿಂದ ಮಾತ್ರ ನಿಖರ, ಪಾರದರ್ಶಕ ಹಾಗೂ ದೋಷರಹಿತ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.ಮತದಾರರ ಪಟ್ಟಿ ಪ್ರಜಾಪ್ರಭುತ್ವದ ಮೂಲಾಧಾರವಾಗಿದ್ದು, ಪ್ರತಿಯೊಬ್ಬ ಅರ್ಹ ನಾಗರಿಕರ ಹೆಸರೂ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗುವಂತೆ ಅಧಿಕಾರಿಗಳು ಜವಾಬ್ದಾ–ರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ಆಯುಕ್ತರು ತಿಳಿಸಿದರು. ಪರಿಶೀಲನೆ ಸಂದರ್ಭದಲ್ಲಿ ಸಂಬಂಧಿತ ಅಧಿಕಾ–ರಿಗಳು, ಬೂತ್ ಮಟ್ಟದ ಅಧಿಕಾರಿಗಳು ಹಾಗೂ ಮಹಾನಗರ ಪಾಲಿಕೆ ಸಿಬ್ಬಂದಿ ಉಪಸ್ಥಿತರಿದ್ದರು

# ತಾಳಿಕೋಟೆಯಲ್ಲಿ ಮಳೆಗಾಗಿ ವಿಶೇಷ ಪ್ರಾರ್ಥನೆ

O ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಈ ಬಾರಿ ಮುಂಗಾರು ಮಳೆ ಇಲ್ಲಿಯವರೆಗೆ ಸರಿಯಾಗಿ ಬಾರದೆ ರೈತರು ತೀವ್ರ ಸಂಕಷ್ಟದಲ್ಲಿದ್ದು ಬರಗಾಲದ ವಾತಾವರಣ ನಿರ್ಮಾಣ ಆಗುತ್ತಿರುವ ಹಿನ್ನೆಲೆಯಲ್ಲಿ ತಾಳಿಕೋಟಿ ಪಟ್ಟಣದ ಮುಸ್ಲಿಂ ಸಮಾಜದ ಬಾಂಧವರು ಶುಕ್ರವಾರ ಪಟ್ಟಣದ ಅಂಜುಮನ್ ಪ್ರೌಢಶಾಲೆಯ ಹತ್ತಿರ ಇರುವ ಬಾಪುಗೌಡ ಸಂಗನಗೌಡ ಪಾಟೀಲ ಅವರ ಹೊಲದಲ್ಲಿ ಮಳೆಗಾಗಿ ವಿಶೇಷ ಪ್ರಾರ್ಥನೆಯನ್ನು ಸಲ್ಲಿಸಿದರು.**

ನೂರಾರು ಮುಸ್ಲೀಮ ಬಾಂಧವರು ಶುಕ್ರವಾರದ ಸಾಮೂಹಿಕ ನಮಾಜ್ ನಿರ್ವಹಿಸಿದ ನಂತರ ಸ್ಥಳೀಯ ಸಾತೋ ಶಹೀದ ಜಾಮೀಯಾ ಮಸೀದಿಯಿಂದ ಅಂಜುಮನ್ ಶಾಲೆಯ ಮೈದಾನದವರೆಗೆ ಪಾದಯಾತ್ರೆ ಮೂಲಕ ತೆರಳಿ ನಂತರ ಈ ವಿಶೇಷ ಪ್ರಾರ್ಥನೆಯನ್ನು ಮೌಲಾನಾ ಮೊಹಮ್ಮದ್ ಅಜರುದ್ದೀನ





ಖಾಸಮಿ ಅವರ ನೇತೃತ್ವದಲ್ಲಿ ನಿರ್ವಹಿಸಿದರು. ನಂತರ ದೇವನಲ್ಲಿ ಸಮೃದ್ಧ ಮಳೆ ಸುರಿಸುವಂತೆ ವಿಶೇಷ ಪ್ರಾರ್ಥನೆಯನ್ನು ಮಾಡಿದರು.

ಈ ಸಂದರ್ಭದಲ್ಲಿ ಮುಸ್ಲಿಂ ಧಾರ್ಮಿಕ ಮುಖಂಡರಾದ ಸೈಯದ್ ಶಕೀಲ ಅಹ್ಮದ್ ಖಾಜಿ ಅವರು ಮಾತನಾಡಿ ಮುಂಗಾರು ಮಳೆ ಕೈಕೊಟ್ಟಿದ್ದರಿಂದ ನಮ್ಮ ರೈತರನ್ನು ಒಳಗೊಂಡು ಎಲ್ಲರೂ ತೊಂದರೆಯಲ್ಲಿದ್ದಾರೆ ಇಂಥ ಸಂಕಷ್ಟದ ಸಮಯದಲ್ಲಿ ನಾವೆಲ್ಲರೂ ಸೃಷ್ಟಿಕರ್ತನ ಮೊರೆ ಹೋಗಿ ಅವನಲ್ಲಿ ಮಳೆಗಾಗಿ ಪ್ರಾರ್ಥಿಸಬೇಕಾಗಿದೆ. ಪ್ರವಾದಿ ಮಹಮ್ಮದರು ಮಳೆ ಬಾರದೆ ಇದ್ದಾಗ ತಮ್ಮ ಅನುಯಾಯಿಗಳಿಗೆ ಈ ರೀತಿಯ ವಿಶೇಷ ಪ್ರಾರ್ಥನೆಯನ್ನು ಸಲ್ಲಿಸಲು ಸೂಚಿಸಿದ್ದಾರೆ ಆದ–'ರಿಂದ ಇವತ್ತು ನಾವೆಲ್ಲರೂ ಇಲ್ಲಿ ಸೇರಿ ವಿಶೇಷ ಪ್ರಾರ್ಥನೆಯನ್ನು ಸಲ್ಲಿಸಿದ್ದೇವೆ ಆ ಅಲ್ಲಾಹನು ಆದಷ್ಟು ಬೇಗ ಸಮೃದ್ಧಿದಾಯಕ ಮಳೆ ಸು–ರಿಸಲೆಂದು ನಮ್ಮ ಪ್ರಾರ್ಥನೆ ಯಾಗಿದೆ ಎಂದರು.

ಸಾಮೂಹಿಕ ಪ್ರಾರ್ಥನೆಯಲ್ಲಿ ಆಲಾ ಮಸೀದಿ ಅಧ್ಯಕ್ಷ ಅಲ್ಲಾಭಕ್ಷ ನಮಾಜಕಟ್ಟಿ, ಇದಗಾ ಕಮೀಟಿ ಉಪಾಧ್ಯಕ್ಷ ಅಬ್ದುಲ್ ರಜಾಕ ಮನಗೂಳಿ, ಖಜಾಂಚಿ ರೋಷನ್ ಡೋಣಿ, ಜಮಾತ್ ಇಸ್ಲಾಮಿ ಹಿಂದ್ ಅಧ್ಯಕ್ಷ ಮುಜಾಹೀದ ಸಮಾಜಕಟ್ಟಿ, ಜಮಾತೆ ಅಹಲೆ ಹದೀಸ್ ಅಧ್ಯಕ್ಷ ಅಬ್ದುಲ್ ರಜಾಕ ನಾಲತವಾಡ, ಜಾಮಿಯಾ ಮಸೀದಿ ಅಧ್ಯಕ್ಷ ಖಾಜಾಹುಸೇನ ಸಗರ, ಈದ್ಗಾ ಕಮಿಟಿ ಅಧ್ಯಕ್ಷ ಮಾಸೂಮಸಾಬಸಾಬ ಕೆಂಭಾವಿ, ಮುಸ್ಲಿಂ ಬ್ಯಾಂಕ್ ಅಧ್ಯಕ್ಷ ಮಹೆಬೂಬ ಕೆಂಭಾವಿ, ನಿರ್ದೇಶಕ ಇಬ್ರಾಹಿಂ ಮನ್ಸೂರ, ಮೊಹಮ್ಮದ್ ಶಫೀಕ ಇನಾಮದಾರ, ಸಮಾಜದ ವಿವಿಧ ಸಂಘ ಸಂಸ್ಥೆಗಳ ಮುಖ್ಯಸ್ಥರು, ಗಣ್ಯರು ಹಾಗೂ ನೂರಾರು ಸಂಖ್ಯೆಯಲ್ಲಿ ಯುವಕರು ಉಪಸ್ಥಿತರಿದ್ದರು.

## ಸಿದ್ರಾಂಪುರ ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲನೆ: ಅಧಿಕಾರಿಗಳಿಗೆ ತೀವ್ರ ತರಾಟೆ

O ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಜಿಲ್ಲಾ ಪ್ರವಾಸದ ಸಂದರ್ಭದಲ್ಲಿ ಸಿದ್ರಾಂಪುರದಲ್ಲಿರುವ ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಭೇಟಿ ನೀಡಿದ ಸಂಬಂಧಿತ ಸಚಿವರು/ಜನಪ್ರತಿನಿಧಿಗಳು ವಸತಿ ನಿಲಯದ ಸ್ಥಿತಿಗತಿಗಳನ್ನು ಪರಿಶೀಲಿಸಿ ಅಧಿಕಾ–ರಿಗಳ ಕಾರ್ಯವೈಖರಿ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.**

ಪರಿಶೀಲನೆ ವೇಳೆ ಕಳೆದ ಮೂರು ವರ್ಷಗಳಿಂದ ನೀರಿನ ಮೂಲಭೂತ ಸೌಲಭ್ಯದ ಕೊರತೆಯಿಂದ ವಸತಿ ನಿಲಯ ಕಾರ್ಯಾರಂಭವಾಗದೇ ಇರುವುದನ್ನು ಗಮನಿಸಿದ ಅವರು, ಕಾವಲುಗಾರರ



ಕೊರತೆಯಿಂದ ವಸತಿ ನಿಲಯದಲ್ಲಿ ಅವ್ಯವಸ್ಥೆ ಉಂಟಾಗಿದ್ದು, ಅಕ್ರಮ ಚಟುವಟಿಕೆಗಳು ನಡೆಯುತ್ತಿರುವುದಲ್ಲದೆ ಸಾರ್ವಜನಿಕ ಆಸ್ತಿಯ ಕಳವು ಪ್ರಕರಣಗಳು ನಡೆದಿರುವ ಬಗ್ಗೆ ಅಧಿಕಾ–ರಿಗಳನ್ನು ತರಾಟೆಗೆ ತೆಗೆದುಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, "ವಿದ್ಯಾರ್ಥಿನಿಯರ ಸುರಕ್ಷತೆ ಮತ್ತು ಶಿಕ್ಷಣದ ವಿಷಯದಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯವನ್ನು ಸಹಿಸಲಾಗುವುದಿಲ್ಲ. ಸರ್ಕಾರದ ಹಣದಿಂದ ನಿರ್ಮಿಸಿರುವ ಸಾರ್ವಜನಿಕ ಆಸ್ತಿಯನ್ನು ಬಳಕೆಗೆ ತರದೇ ನಿರ್ಲಕ್ಷ್ಯ ವಹಿಸಿರುವುದು ಅತ್ಯಂತ ಗಂಭೀರ ವಿಷಯವಾಗಿದೆ" ಎಂದು ಹೇಳಿದರು.

ವಸತಿ ನಿಲಯಕ್ಕೆ ತುರ್ತಾಗಿ ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಂತೆ, ಸೂಕ್ತ ಭದ್ರತೆಗಾಗಿ ಕಾವಲುಗಾರರನ್ನು ನಿಯೋಜಿಸುವುದರ ಜೊತೆಗೆ ಅಗತ್ಯವಿರುವ ಪೊಲೀಸ್ ಭದ್ರತೆ ಒದಗಿಸುವಂತೆ ಅಧಿಕಾ–ರಿಗಳಿಗೆ ನಿರ್ದೇಶನ ನೀಡಿದರು. ಅಲ್ಲದೆ, ಬಾಕಿ ಉಳಿದಿರುವ ಎಲ್ಲ ಕಾಮಗಾರಿ ಮತ್ತು ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಶೀಘ್ರ ಪೂರ್ಣಗೊಳಿಸಿ ವಿದ್ಯಾರ್ಥಿನಿಯರ ವಸತಿ ನಿಲಯವನ್ನು ಆದಷ್ಟು ಬೇಗ ಕಾರ್ಯಾರಂಭಗೊಳಿಸಬೇಕು ಎಂದು ಸೂಚಿಸಿದರು. ಈ ಕುರಿತು ಕೈಗೊಂಡ ಕ್ರಮಗಳ ಸಮಗ್ರ ವರದಿಯನ್ನು ನಿಗದಿತ ಅವಧಿಯೊಳಗೆ ಸಲ್ಲಿಸುವಂತೆ ಸಂಬಂಧಿತ ಇಲಾಖೆಯ ಅಧಿಕಾ–ರಿಗಳಿಗೆ ನಿರ್ದೇಶನ ನೀಡಿದರು. ವಿದ್ಯಾರ್ಥಿನಿಯರಿಗೆ ಸುರಕ್ಷಿತ ಹಾಗೂ ಉತ್ತಮ ವಸತಿ ವ್ಯವಸ್ಥೆ ಕಲ್ಪಿಸುವುದು ಸರ್ಕಾರದ ಆದ–'ಶ್ಯತೆಯಾಗಿದ್ದು, ಈ ವಿಷಯದಲ್ಲಿ ಯಾವುದೇ ನಿರ್ಲಕ್ಷ್ಯಕ್ಕೆ ಅವಕಾಶವಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

## ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಶಾಲಾ ಮಕ್ಕಳಿಗೆ 'ತೆರೆದ ಮನೆ' ಕಾರ್ಯಕ್ರಮ: ಪೊಲೀಸ್ ಇಲಾಖೆಯ ಕಾರ್ಯವೈಖರಿ ಪರಿಚಯ

O ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ವಿದ್ಯಾರ್ಥಿಗಳಲ್ಲಿ ಪೊಲೀಸ್ ಇಲಾಖೆಯ ಬಗ್ಗೆ ಉತ್ತಮ ಅರಿವು ಮೂಡಿಸುವುದು, ಕಾನೂನು ಪಾಲನೆ ಕುರಿತು ಜಾಗೃತಿ ಬೆಳೆಸುವುದು ಹಾಗೂ ಸಮುದಾಯ ಪೊಲೀಸ್ ಪರಿಕಲ್ಪನೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ 'ತೆರೆದ ಮನೆ' (Open House) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**

ಜಾಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಭಾಗ್ಯವಂತಿ ಹಿರಿಯ ಪ್ರಾಥಮಿಕ ಶಾಲೆ, ಜಾಲಹಳ್ಳಿ ವಿದ್ಯಾರ್ಥಿಗಳನ್ನು ಠಾಣೆಗೆ ಆಹ್ವಾನಿಸಿ, ಪೊಲೀಸ್ ಇಲಾಖೆಯ ಕಾರ್ಯವೈಖರಿ, ಪೊಲೀಸ್ ಅಧಿಕಾ–ರಿಗಳ ಜವಾಬ್ದಾರಿಗಳು ಹಾಗೂ ಸಾರ್ವಜನಿಕ–ರಿಗೆ ನೀಡಲಾಗುವ ವಿವಿಧ ಸೇವೆಗಳ ಕು–ರಿತು ವಿವರವಾದ ಮಾಹಿತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಪೊಲೀಸ್ ಅಧಿಕಾರಿಗಳು



ವಿದ್ಯಾರ್ಥಿಗಳಿಗೆ ಠಾಣೆಯ ವಿವಿಧ ವಿಭಾಗಗಳನ್ನು ಪರಿಚಯಿಸಿ, ದೂರು ದಾಖಲಿಸುವ ವಿಧಾನ, ತುರ್ತು ಸಂದರ್ಭಗಳಲ್ಲಿ ಪೊಲೀಸ್ ಸಹಾಯ ಪಡೆಯುವ ಕ್ರಮ, ಪೊಲೀಸ್ ನಿಯಂತ್ರಣ ಕೊಠಡಿಯ ಕಾರ್ಯನಿರ್ವಹಣೆ, ಸಂಚಾರ ನಿಯಮಗಳ ಪಾಲನೆ, ಮಹಿಳೆ ಮತ್ತು ಮಕ್ಕಳ ಸುರಕ್ಷತೆ, ಬಾಲ್ಯ ವಿವಾಹ, ಬಾಲಕಾರ್ಮಿಕ ಪದ್ಧತಿ, ಮಾದಕ ವಸ್ತುಗಳ ದುಷ್ಪರಿಣಾಮಗಳು ಹಾಗೂ ಸೈಬರ್ ಅಪರಾಧಗಳಿಂದ ರಕ್ಷಣೆ ಪಡೆಯುವ ವಿಧಾನಗಳ ಕುರಿತು ಜಾಗೃತಿ ಮೂಡಿಸಿದರು.

ವಿದ್ಯಾರ್ಥಿಗಳು ಪೊಲೀಸ್ ಠಾಣೆಯ ವಿವಿಧ ಕೊಠಡಿಗಳು, ದಾಖಲಾತಿ ವಿಭಾಗ, ಶಸ್ತ್ರಾಸ್ತ್ರಗಳ ಸುರಕ್ಷತಾ ವ್ಯವಸ್ಥೆ ಹಾಗೂ ಪೊಲೀಸ್ ವಾಹನಗಳನ್ನು ವೀಕ್ಷಿಸಿ ಕುತೂಹಲದಿಂದ ಮಾಹಿತಿ ಪಡೆದರು. ಪೊಲೀಸ್ ಅಧಿಕಾರಿಗಳೊಂದಿಗೆ ಸಂವಾದ ನಡೆಸಿದ ವಿದ್ಯಾರ್ಥಿಗಳು ತಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದು ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಪೊಲೀಸ್ ಅಧಿಕಾರಿಗಳು, "ಪೊಲೀಸ್ ಠಾಣೆ ಸಾರ್ವಜನಿಕರ ಸ್ನೇಹಿತ. ಯಾವುದೇ ಸಮಸ್ಯೆ ಅಥ–'ವಾ ತುರ್ತು ಪರಿಸ್ಥಿತಿಯಲ್ಲಿ ಮಕ್ಕಳು ಮತ್ತು ಸಾರ್ವಜನಿಕರು ಯಾವುದೇ ಭಯವಿಲ್ಲದೆ ಪೊಲೀಸ್ ಸಹಾಯ ಪಡೆಯಬೇಕು. ಕಾನೂನು ಪಾಲನೆ, ಶಿಸ್ತು ಮತ್ತು ಸಾಮಾಜಿಕ ಜವಾಬ್ದಾ–ರಿಯ ಅರಿವು ಬಾಲ್ಯದಿಂದಲೇ ಬೆಳೆಸಿಕೊಳ್ಳುವುದು ಅತ್ಯಂತ ಮುಖ್ಯ" ಎಂದು ತಿಳಿಸಿದರು.

ಶಾಲೆಯ ಮುಖ್ಯ ಶಿಕ್ಷಕರು ಪೊಲೀಸ್ ಇಲಾಖೆಯ ಈ ವಿನೂತನ ಕಾರ್ಯಕ್ರಮವನ್ನು ಶ್ಲಾಘಿಸಿ, ವಿದ್ಯಾರ್ಥಿಗಳಲ್ಲಿ ಕಾನೂನು ಅರಿವು, ನಾಗರಿಕ ಪ್ರಜ್ಞೆ ಹಾಗೂ ಪೊಲೀಸ್ ಇಲಾಖೆಯ ಮೇಲಿನ ವಿಶ್ವಾಸವನ್ನು ಬೆಳೆಸುವಲ್ಲಿ ಇಂತಹ ಕಾರ್ಯಕ್ರಮಗಳು ಅತ್ಯಂತ ಉಪಯುಕ್ತವಾಗಿವೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಜಾಲಹಳ್ಳಿ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿ, ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

**ಎಂ.ಪಿ.ಇ.ಡಿ. (M.P.E.d. - Master of Physical Education)**

ಎಂ.ಪಿ.ಇಡಿ. (M.P.E.d. - Master of Physical Education) ಎನ್ನುವುದು ದೈಹಿಕ ಶಿಕ್ಷಣದಲ್ಲಿನ 2 ವರ್ಷಗಳ (4 ಸೆಮಿಸ್ಟರ್‌ಗಳು) ಸ್ನಾತಕೋತ್ತರ (PG) ಪದವಿಯಾಗಿದೆ. ದೈಹಿಕ ಶಿಕ್ಷಣದಲ್ಲಿ ಬಿ.ಪಿ.ಇಡಿ. (B.P.Ed.) ಪದವಿ ಪೂರೈಸಿದವರು ಈ ಕೋರ್ಸ್‌ಗೆ ಸೇರಲು ಅರ್ಹರಾಗಿರುತ್ತಾರೆ. ಇದು ದೈಹಿಕ ಶಿಕ್ಷಣ ಶಿಕ್ಷಕರಾಗಿ, ಕ್ರೀಡಾ ತರಬೇತುದಾರರಾಗಿ ಅಥವಾ ಕ್ರೀಡಾ ನಿರ್ದೇಶಕರಾಗಿ ವೃತ್ತಿಜೀವನವನ್ನು ರೂಪಿಸಲು ಅತ್ಯುತ್ತಮ ಕೋರ್ಸ್ ಆಗಿದೆ.ಪ್ರಮುಖ ವಿವರಗಳು:ಅವಧಿ: 2 ವರ್ಷಗಳು (4 ಸೆಮಿಸ್ಟರ್‌ಗಳು).ಅರ್ಹತೆ: ಅಭ್ಯರ್ಥಿಯು ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಕನಿಷ್ಠ 50% ಅಂಕಗಳೊಂದಿಗೆ ಃ.ಕ.ಇಜ. (ಬ್ಯಾಚುಲರ್ ಆಫ್ ಫಿಸಿಕಲ್ ಎಜುಕೇಶನ್) ಪದವಿಯನ್ನು ಪೂರ್ಣಗೊಳಿಸಿರಬೇಕು.ಕೋರ್ಸ್ ಸ್ವರೂಪ: ಇದು ಕೇವಲ ಸೈದ್ಧಾಂತಿಕ ತರಗತಿಗಳಿಗೆ ಮಾತ್ರ ಸೀಮಿತವಾಗಿರದೆ, ಪ್ರಾಯೋಗಿಕ ಕ್ರೀಡೆಗಳು, ವ್ಯಾಯಾಮ ವಿಜ್ಞಾನ ಮತ್ತು ದೈಹಿಕ ತರಬೇತಿಯನ್ನು ಒಳಗೊಂಡಿರುತ್ತದೆ. ಉದ್ಯೋಗಾವಕಾಶಗಳು: ಸರ್ಕಾರಿ ಹಾಗೂ ಖಾಸಗಿ ಶಾಲೆಗಳು ಮತ್ತು ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಉಪನ್ಯಾಸಕರು/ ದೈಹಿಕ ಶಿಕ್ಷಣ ನಿರ್ದೇಶಕರು (Physical Director), ವಿಶ್ವವಿದ್ಯಾನಿಲಯಗಳಲ್ಲಿ ಕ್ರೀಡಾ ನಿರ್ದೇಶಕರು, ಫಿಟ್‌ನೆಸ್ ತರಬೇತುದಾರರು (Fitness Trainers) ಮತ್ತು ಕ್ರೀಡಾ ಇಲಾಖೆಗಳಲ್ಲಿ ಉದ್ಯೋಗಾವಕಾಶಗಳು ಲಭ್ಯವಿವೆ.ಕಾಲೇಜುಗಳು: ಕರ್ನಾಟಕ ರಾಜ್ಯದಾದ್ಯಂತವಿರುವ ಕರ್ನಾಟಕ ವಿಶ್ವವಿದ್ಯಾಲಯ (ಧಾರವಾಡ), ಮೈಸೂರು ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯ ಮತ್ತು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯಗಳಲ್ಲಿ ಈ ಕೋರ್ಸ್ ಅನ್ನು ನೀಡಲಾಗುತ್ತದೆ. ಕೋರ್ಸ್‌ನ ಸಂಪೂರ್ಣ ವಿವರಗಳು ಮತ್ತು ಪ್ರವೇಶ ಪ್ರಕ್ರಿಯೆಯನ್ನು Shiksha M.P.Ed Information ವೆಬ್‌ಸೈಟ್ ಮೂಲಕ ಪರಿಶೀಲಿಸಬಹುದು.

# ಜನಸಂಖ್ಯೆ ನಿಯಂತ್ರಣ ಪ್ರತಿಯೊಬ್ಬರ ಜವಾಬ್ದಾರಿ: ಲಾಜರ್ ಸಿರಿಲ್

o ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿಂಧನೂರು ತಾಲೂಕಿನ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ವಿಶ್ವ ಜನಸಂಖ್ಯಾ ದಿನವನ್ನು ಅರ್ಥ-ಪೂರ್ಣವಾಗಿ ಆಚರಿಸಲಾಯಿತು.ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಗೆ ಜನಸಂಖ್ಯೆ ನಿಯಂತ್ರಣ,**

ಕುಟುಂಬ ಕಲ್ಯಾಣ ಹಾಗೂ ಆರೋಗ್ಯಕರ ಸಮಾಜ ನಿರ್ಮಾಣ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು.ಈ ಸಂದರ್ಭದಲ್ಲಿ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಲಾಜರ್ ಸಿರಿಲ್ ಅವರು ಮಾತನಾಡಿ, ವಿಶ್ವ ಜನಸಂಖ್ಯಾ ದಿನದ ಮಹತ್ವವನ್ನು ವಿವರಿಸಿದರು.ಅವರು ಮಾತನಾಡುತ್ತಾ, "ವಿಶ್ವ ಜನಸಂಖ್ಯಾ ದಿನವನ್ನು ಪ್ರತಿವರ್ಷ ಜುಲೈ 11ರಂದು ಆಚರಿಸುವ ಉದ್ದೇಶ ಜನಸಂಖ್ಯೆಯ ಏರಿಕೆಯಿಂದ ಉಂಟಾಗುವ ಸಾಮಾಜಿಕ, ಆರ್ಥಿಕ ಹಾಗೂ ಆರೋಗ್ಯ ಸಂಬಂಧಿತ ಸವಾಲುಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದಾಗಿದೆ.ಜನಸಂಖ್ಯೆ ಹೆಚ್ಚಳವು





ಶಿಕ್ಷಣ, ಆರೋಗ್ಯ, ಉದ್ಯೋಗ, ಆಹಾರ, ಕುಡಿಯುವ ನೀರು, ವಸತಿ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಹೆಚ್ಚಿನ ಒತ್ತಡವನ್ನು ಉಂಟುಮಾಡುತ್ತದೆ.

ಆದ್ದರಿಂದ ಪ್ರತಿಯೊಬ್ಬರೂ ಜವಾಬ್ದಾ-ರಿಯುತ ನಾಗರಿಕರಾಗಿ ಕುಟುಂಬ ಕಲ್ಯಾಣ ಹಾಗೂ ಜನಸಂಖ್ಯೆ ನಿಯಂತ್ರಣದ ಬಗ್ಗೆ ಅರಿವು ಹೊಂದಿರಬೇಕು" ಎಂದು ಹೇಳಿದರು.ಮುಂದುವರಿದು, "ಆರೋಗ್ಯವಂತ ಕುಟುಂಬವೇ ಆರೋಗ್ಯವಂತ ಸಮಾಜದ ಅಡಿಪಾಯ. ಕುಟುಂಬ ಯೋಜನೆ, ತಾಯಿ ಮತ್ತು ಶಿಶು ಆರೋಗ್ಯ, ಮಹಿಳಾ ಶಿಕ್ಷಣ, ಪೌಷ್ಟಿಕ ಆಹಾರ, ಲಿಂಗ ಸಮಾನತೆ ಹಾಗೂ ಯುವಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸುವುದು ಇಂದಿನ ಅಗತ್ಯವಾಗಿದೆ.ವಿಶೇಷವಾಗಿ ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಹಾಗೂ ಫಾರ್ಮಸಿ ವಿದ್ಯಾರ್ಥಿಗಳು ಸಮಾಜದಲ್ಲಿ ಆರೋಗ್ಯ ಶಿಕ್ಷಣ ನೀಡುವ ಪ್ರಮುಖ ಜವಾಬ್ದಾರಿಯನ್ನು ಹೊಂದಿದ್ದಾರೆ. ಅವರು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಜನರಿಗೆ ಆರೋಗ್ಯಕರ ಜೀವನಶೈಲಿ, ಕುಟುಂಬ ಕಲ್ಯಾಣ ಮತ್ತು ಜನಸಂಖ್ಯೆ ನಿಯಂತ್ರಣದ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಸಮಾಜದ ಅಭಿವೃದ್ಧಿಗೆ ತಮ್ಮ ಅಮೂಲ್ಯ ಕೊಡುಗೆ ನೀಡಬೇಕು" ಎಂದು ಕರೆ ನೀಡಿದರು.

ಅಲ್ಲದೆ, "ಸುಸ್ಥಿರ ಅಭಿವೃದ್ಧಿ ಸಾಧಿಸಬೇಕಾದರೆ ಆರೋಗ್ಯವಂತ, ಶಿಕ್ಷಣವಂತ ಮತ್ತು ಜವಾಬ್ದಾರಿಯುತ ಸಮಾಜ ನಿರ್ಮಾಣ ಅಗತ್ಯವಾಗಿದೆ. ಯುವಜನರು ಸಾಮಾಜಿಕ ಜವಾಬ್ದಾರಿಯನ್ನು ಅರಿತು ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು" ಎಂದು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಸಂದೇಶ ನೀಡಿದರು.ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ವಿಶ್ವ ಜನಸಂಖ್ಯಾ ದಿನದ ಅಂಗವಾಗಿ ಪ್ರತಿಜ್ಞಾ ವಿಧಿಯನ್ನು ಬೋಧಿಸಿ, ಜನಸಂಖ್ಯೆ ನಿಯಂತ್ರಣ, ಆರೋಗ್ಯಕರ ಕುಟುಂಬ, ಮಹಿಳಾ ಸಬಲೀಕರಣ ಹಾಗೂ ಸಮಾಜದಲ್ಲಿ ಆರೋಗ್ಯ ಜಾಗೃತಿ ಮೂಡಿಸಲು ಸದಾ ಶ್ರಮಿಸುವ ಸಂಕಲ್ಪ ಮಾಡಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಇರ್ಷಾದ್ ಕೆ ಹಾಗೂ ಖ್ಯಾತ ದಂತ ತಜ್ಞರಾದ ಡಾ. ಸುಮಾ, ಆಸಿಫ್ ಉಪನ್ಯಾಸಕರಾದ ರಾಜೇಶ್, ಅಶು ಪಾಷಾ, ಸಂತೋಷಿ, ಸುಧಾ, ವೀರೇಶ್, ಶೋಭಾ, ಚೈತ್ರ, ದಿಲೀಪ್, ಹರ್ಷಿತಾ, ಸಾಗರ್, ಸನಾ ಹಾಗೂ ಸುರೇಶ್ ಯಾದವ್ ಸೇರಿದಂತೆ ವಿವಿಧ ವಿಭಾಗಗಳ ಉಪನ್ಯಾಸಕರು ಹಾಗೂ ಡಿ ಫಾರ್ಮಸಿ, ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ವಿಪಿಎಂ ಶಾಲೆಯಲ್ಲಿ ವನಮಹೋತ್ಸವ

o ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪಟ್ಟಣದ ವಿ.ಪಿ.ಎಂ ಮತ್ತು ಸೆಕ್ರೇಡ್ ಹಾರ್ಟ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸಸಿಗಳನ್ನು ನೆಟ್ಟು ನೀರುಣಿಸುವುದರ ಮೂಲಕ ವನಮಹೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು.**

ಮುಖ್ಯ ಅತಿಥಿಗಳಾಗಿ ಆಗಮಿಸಿದ ಅರಣ್ಯ ಇಲಾಖೆಯ ಬೀಟ್ ಫಾರೆಸ್ಟರ್ ಮಹಾಂತೇಶ ಹಾದಿಮನಿ ಮಾತನಾಡಿ, ಪರಿಸರದ ಮಹತ್ವವನ್ನು ಮಕ್ಕಳಿಗೆ ತಿಳಿಸಿಕೊಡಬೇಕು. ಮರಗಳ ರಕ್ಷಣೆ, ಕಾಡು, ಬೆಟ್ಟ ಗಳಿಂದ ನಮಗಿರುವ ಲಾಭಗಳನ್ನು ತಿಳಿಸಿಕೊಡಲು ನಿಸರ್ಗದತ್ತ ಮಕ್ಕಳಿಗೆ ಸಾಕ್ಷ ದರ್ಶನ ಮಾಡಿಸಬೇಕು. ನಮಗೆ ಇಂದು ಮಳೆ ಬಾರದಿರಲು ಕಾರಣ ಇವುಗಳಾಗಿವೆ ಎಂದರು. ಅದಕ್ಕೆ ಸೂಕ್ತ ಪರಿಹಾರವೆಂದರೇ ಮಗುವಿಗೊಂದು



ಮರ, ಶಾಲೆಗೊಂದು ವನ ಆಗಬೇಕಿದೆ. ಅಂದಾಗ ಮಾತ್ರ ನಮ್ಮ ಕಾರ್ಯಕ್ರಮಗಳಿಗೆ ಮಹತ್ವವಿರುತ್ತದೆ. ಸದೃಡವಾದ ದೇಹದಲ್ಲಿ ಸದೃಡವಾದ ಮನಸ್ಸಿರಬೇಕಾದರೇ ಆ ದೇಹಕ್ಕೆ ಸದೃಡವಾದ ಉಸಿರು ಅಷ್ಟೆ ಪ್ರಮುಖವಾಗುತ್ತೆದೆಂದು ಹೇಳಿದರು. ಪ್ರತಿಯೊಬ್ಬ ರೈತರು ಮತ್ತು ರೈತರ ಮಕ್ಕಳು ತಮ್ಮ ತಮ್ಮ ಮನೆ ಮತ್ತು ಹೊಲಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ಗಿಡ ಮರಗಳನ್ನು ಬೆಳೆಸಬೇಕೆಂದು ಹೇಳಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ವ್ಯವಸ್ಥಾಪಕ ಫಾದರ ಸುನೀಲ ಅಂದ್ರಾದೆ ಅತಿಥಿಗಳನ್ನು ಗೌರವಿಸಿ ಮಾತನಾಡಿದರು. ವೇದಿಕೆಯಲ್ಲಿ ಶಾಲೆಯ ಮುಖ್ಯೋಪಾಧ್ಯಾಯಿನಿ ಸಿಸ್ಟರ್ ಐರಿನ್ ತೌರೋ. ಹಿರಿಯ ಶಿಕ್ಷಕ ನಾಗಭೂಷಣ ಸಜ್ಜನ ಇತರರಿದ್ದರು. ಮಕ್ಕಳಿಂದ ಪರಿಸರ ಕಾಳಜಿಯ ಕುರಿತು ಹಾಡು ಮತ್ತು ಕಿರು ನಾಟಕ ಪ್ರರ್ದಶನದ ಮೂಲಕ ಎಲ್ಲಾ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಮಹತ್ವ ತಿಳಿಸಿಕೊಡಲಾಯಿತು. ಶಿಕ್ಷಕರಾದ ಉದಯ ಕಟ್ಟಿಮನಿ, ಸೋನಿ ಮಿಸ್ ವಿದ್ಯಾರ್ಥಿನಿ ಫರಹತ್ , ಅಬ್ದುಲ್ ನಿರ್ವಹಿಸಿದರು. ಜೈರಾಬಿ ಸ್ವಾಗತಿಸಿದರು. ಜುನೇದ ವಂದಿಸಿದರು. ಶಾಲೆಯ ಎಲ್ಲಾ ಶಿಕ್ಷಕ, ಶಿಕ್ಷಕಿಯರು, ವಿದ್ಯಾರ್ಥಿಗಳು ಉಪಸ್ಥಿತ-ರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ವರ್ಗಾವಣೆಗೊಂಡ ನೌಕರರ ಬೀಳ್ಕೊಡುವ ಸಮಾರಂಭ

o ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸೇವೆ ಸಲ್ಲಿಸಿ ವರ್ಗಾವಣೆಗೊಂಡಿರುವ ನರ್ಸಿಂಗ್ ಆಫೀಸರ್ ಜ್ಯೋತಿ ಕೋಳೂರಗಿ, ಕಚೇರಿ ಅಧೀಕ್ಷಕಿ ಜಮುನಾ ಅರಸಂಗಿ, ಹಿರಿಯ ಆರೋಗ್ಯ ನಿರಕ್ಷಣಾಧಿಕಾರಿಯಾಗಿ ಪಧೋನ್ನತಗೊಂಡ ಫಯಾಜ್ ಅತ್ತಾರ ಹಾಗೂ ತಾಲೂಕಿನ ಕೊಣ್ಣೂರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಿರಿಯ ವೈದ್ಯಾಧಿಕಾರಿಗಳಾದ**



ಡಾ. ಶ್ರೀಶೈಲ್ ಹುಕ್ಕೇರಿ ಅವರು ಆಲಮಟ್ಟಿ ಕೆಬಿಜೆಎನ್‌ಎಲ್ ಆಸ್ಪತ್ರೆಗೆ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಅವರನ್ನು ಶನಿವಾರ ಸಮುದಾಯ ಆರೋಗ್ಯ ಕೇಂದ್ರದ ವತಿಯಿಂದ ಸನ್ಮಾನಿಸಿ ಬಿಳ್ಕೊಡಲಾಯಿತು.ಇದೇ ಸಂದರ್ಭದಲ್ಲಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ನೂತನವಾಗಿ ಹಿರಿಯ ವೈದ್ಯಾಧಿಕಾರಿಗಳಾಗಿ ಜಿಲ್ಲಾ ಆಸ್ಪತ್ರೆಯಿಂದ ವರ್ಗಾವಣೆಗೊಂಡು ಬಂದಿರುವ ಡಾ.ಎ ಜಿ ಬಿರಾದಾರ ಇವರನ್ನು ಸನ್ಮಾನಿಸಿ ಸ್ವಾಗತಿಸಲಾಯಿತು. ಕಾರ್ಯಕ್ರಮದಲ್ಲಿ ರಾಜ್ಯ ಸಹಕಾರ ಸಂಘಗಳ ಮಹಾಮಂಡಳಿ ನಿರ್ದೇಶಕ ಆನಂದ ಬಿರಾದಾರ, ಹಿರಿಯ ವೈದ್ಯಾಧಿಕಾರಿ ಡಾ. ಮಧುಬಾಲಾ ಸಿಂಘಾಲ್,ಡಾ. ಸಾಗರ ಪಾಟೀಲ, ಸಿಬ್ಬಂದಿ ವರ್ಗದವರಾದ ನಾಗರಾಜ್ ಪಾಟೀಲ, ರಾಮನಗೌಡ ಬಿರಾದಾರ, ಇಸಾಕ್ ಚೌದ್ರಿ, ಮಹೆಬೂಬ ನಡುವಿನಮನಿ, ಆಸಿಫ್ ಕಲಕೇರಿ ಮತ್ತಿತರರು ಇದ್ದರು.

# ರಜಪೂತ ಅಭಿವೃದ್ಧಿ ಮಂಡಳಿ ಸ್ಥಾಪನೆಗೆ ಆಗ್ರಹಿಸಿ ಪ್ರತಿಭಟನೆ




o ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಕರ್ನಾಟಕದಲ್ಲಿ ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ರಜಪೂತ ಸಮಾಜದ ಏಳಿಗೆಗಾಗಿ ರಜಪೂತ ಅಭಿವೃದ್ಧಿ ನಿಗಮ ಮಂಡಳಿ ಸ್ಥಾಪಿಸಲು ಕ್ರಮ ವಹಿಸುವಂತೆ ಒತ್ತಾಯಿಸಿ ಸ್ಥಳೀಯ ರಜಪೂತ ಸಮಾಜ ಕ್ಷೇಮಾಭಿವೃದ್ಧಿ ಸಂಘ(ರಿ) ವತಿಯಿಂದ ಪಟ್ಟಣದ ಮಹಾರಾಣಾ ಪ್ರತಾಪ್ ಸಿಂಹ ಸರ್ಕಲ್ ದಿಂದ ತಹಶೀಲ್ದಾರ್ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ಮೂಲಕ ತೆರಳಿ ಉಪತಹಸಿಲ್ದಾರ್ ಮೂಲಕ ಸರ್ಕಾರಕ್ಕೆ ಶುಕ್ರವಾರ ಮನವಿ ಸಲ್ಲಿಸಲಾಯಿತು.**

ಈ ಸಂದರ್ಭದಲ್ಲಿ ಪುರಸಭೆ ಮಾಜಿ ಸದಸ್ಯ ವಿಜಯಸಿಂಗ್ ಹಜೇರಿ ಅವರು ಮಾತನಾಡಿ ರಾಜ್ಯದಲ್ಲಿ ಲಕ್ಷಾಂತರ ಜನಸಂಖ್ಯೆ ಹೊಂದಿರುವ ರಜಪೂತ ಸಮಾಜವು ಆರ್ಥಿಕವಾಗಿ ಶೈಕ್ಷಣಿವಾಗಿ ಹಾಗೂ ಉದ್ಯೋಗ ರಂಗದಲ್ಲಿ ತೀವ್ರವಾಗಿ ಹಿಂದುಳಿದಿದೆ. ನಮ್ಮ ಯುವಕ-ರಿಗೆ ಸೂಕ್ತ ಪ್ರೋತ್ಸಾಹ ಮತ್ತು ಮಾರ್ಗದರ್ಶನ ಸಿಗದೇ ಅವರು ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತಿಲ್ಲ. ನಾಡಿನ ಅಭಿವೃದ್ಧಿಯಲ್ಲಿ ನಮ್ಮ ಸಮಾಜದ ಕೊಡುಗೆಯೂ ಅಪಾರವಾಗಿದೆ ಎಂದ ಅವರು ಈ ವಿಷಯಕ್ಕೆ ಸಂಬಂಧಿಸಿ ಈಗಾಗಲೇ ಸಮಾಜದ ಕೌಟುಂಬಿಕ ಸಮೀಕ್ಷೆ ಹಾಗೂ ಡಿಜಿಟಲ್ ನೋಂದಣಿ ಪ್ರಕ್ರಿಯೆ ಯಶಸ್ವಿಯಾಗಿ ನಡೆದಿದ್ದು ಸಮಗ್ರ ದತ್ತಾಂಶಗಳ ವರದಿಯು ಹಿಂದುಳಿದ ವರ್ಗಗಳ ಕಲ್ಯಾಣ ಆಯೋಗದ ಪರಿಶೀಲನೆಯಲ್ಲಿದೆ.

ಕಲಬುರ್ಗಿ ಜಿಲ್ಲೆಯಲ್ಲಿ ಆರಂಭವಾಗಿರುವ ಈ ಪ್ರಕ್ರಿಯೆಗೆ ಪೂರಕವಾಗಿ ನಮ್ಮ ಸ್ಥಳೀಯ ಸಮಾಜವೂ ಕೂಡ ಇದಕ್ಕೆ ಧ್ವನಿಗೂಡಿಸುತ್ತಿದೆ. ನಮ್ಮ ಸಮಾಜದ ಶ್ರೇಯೋಭಿವೃದ್ಧಿಗಾಗಿ ಆದ-ಷ್ಟು ಬೇಗ ನಿಗಮ ಮಂಡಳಿ ಸ್ಥಾಪನೆಗಾಗಿ ಮನವಿ ಪತ್ರವನ್ನು ಎಲ್ಲಡೆಯಿಂದ ಕಳಿಸಿಕೊಡಲಾಗುತ್ತಿದೆ ಈ ಕುರಿತು ಮುಖ್ಯಮಂತ್ರಿಗಳು ಕ್ರಮ ವಹಿಸಬೇಕೆಂಬುದು ನಮ್ಮ ಒತ್ತಾಯವಾಗಿದೆ ಎಂದರು. ರಜಪೂತ ಸಮಾಜದ ಅಧ್ಯಕ್ಷ ಹರಿಸಿಂಗ್ ಮೂಲಿಮನಿ,ಉಪಾಧ್ಯಕ್ಷ ರತನಸಿಂಗ್ ಕೊಕಟನೂರ,ಭರತಸಿಂಗ್ ವಿಜಾಪುರ,ಸುರೇಶ ಹಜೇರಿ,ಮಾನಸಿಂಗ್ ಕೊಕಟನೂರ,

ಗೋವಿಂದಸಿಂಗ್ ಮೂಲಿಮನಿ, ರಘುರಾಮಸಿಂಗ್ ಹಜೇರಿ(ಶೇಠ), ಸುರೇಶಕುಮಾರ ಹಜೇರಿ,ಕೇಸರಸಿಂಗ್ ಹಜೇರಿ, ಮಾನಸಿಂಗ್ ಹಜೇರಿ, ಸೀತಾರಾಮ್ ವಿಜಾಪುರ, ವಿಠಲಸಿಂಗ್ ಬೆಕಿನಾಳ,ಕೇಸು ದೇವಿ, ಅಶೋಕ ಬೆಕಿನಾಳ, ನಾರಾಯಣಸಿಂಗ್ ಕೊಕಟನೂರ, ದಿಲೀಪ್ ಹಜೇರಿ, ಅರುಣಸಿಂಗ್ ದಡೇದ, ಗಂಗಾರಾಮಸಿಂಗ್ ವಿಜಾಪುರ,ರಾಜು ವಿಜಾಪುರ, ರತನಸಿಂಗ್ ದೇವಿ, ಹರೀಶ ಮೂಲಿಮನಿ, ನಿಖಿಲ್ ಮೂಲಿಮನಿ, ರಾಘು ದೇವಿ, ಆನಂದ ಹಜೇರಿ, ವಿಶ್ವ ನಾಯಕ, ಶುಭಂ ಬಿಜಾಪುರ, ರಾಘು ಮೂಲಿಮನಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# 2 ಕೋಟಿ ವೆಚ್ಚದ ಸಿಸಿ ರಸ್ತೆ, ಚರಂಡಿ ಕಾಮಗಾರಿಗೆ ಶಾಸಕಿ ಕರೆಮ್ಮ ನಾಯಕ ಭೂಮಿ ಪೂಜೆ

o ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲ್ಲೂಕಿನ ಗಂಗಾನಾಯಕ ತಾಂಡದಲ್ಲಿ ಸುಮಾರು ?2 ಕೋಟಿ ರೂಪಾಯಿ ವೆಚ್ಚದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾ-ರಿಗೆ ಶಾಸಕಿ ಕರೆಮ್ಮ ಜಿ. ನಾಯಕ ಅವರು ಶನಿವಾರ ಭೂಮಿ ಪೂಜೆ ನೆರವೇರಿಸಿದರು.**

ಬಳಿಕ ಶಾಸಕಿ ಕರೆಮ್ಮ ಜಿ ನಾಯಕ ಮಾತನಾಡಿ, ಕೆಕೆಆರ್‌ಡಿಬಿ ಹಾಗೂ ಮೈಕ್ರೋ ಯೋಜನೆಯ ಅನುದಾನದಡಿ ಈ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ಪ್ರತಿ



ಗ್ರಾಮದಲ್ಲೂ ಮೂಲ ಸೌಕರ್ಯ ಒದಗಿಸುವುದು ನಮ್ಮ ಗುರಿ. ಅದರಂತೆ ಗಂಗಾನಾಯ್ಕ ತಾಂಡದಲ್ಲಿ ಅಗತ್ಯವಿರುವ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ-ಕ್ಕೆ ಚಾಲನೆ ನೀಡಲಾಗಿದೆ" ಎಂದು ತಿಳಿಸಿದರು.

"ಗ್ರಾಮೀಣ ಭಾಗದ ಜನ-ರಿಗೆ ಸಂಪರ್ಕ ವ್ಯವಸ್ಥೆ ಹಾಗೂ ನೈರ್ಮಲ್ಯ ಕಾಪಾಡುವುದು ಅತಿ ಮುಖ್ಯ. ಗುಣಮಟ್ಟದ ಕಾಮಗಾರಿ ನಡೆಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಸಾರ್ವಜನಿಕರು ಕೂಡ ಕಾಮಗಾ-ರಿಯ ಮೇಲೆ ನಿಗಾ ವಹಿಸಬೇಕು" ಎಂದರು. ದೇವದುರ್ಗ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಬಸನಗೌಡ ದೇಸಾಯಿ, ಸಿದ್ದಣ್ಣ ತಾತ ಮುಂಡರಗಿ, ಅರಕೇರಾ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಸಿದ್ದಣ್ಣ ದೊಂಡಂಬಳಿ, ಶರಣಪ್ಪ ಬಳೆ, ಶಾಲಂ ಉದ್ದಾರ್, ಜಯಪ್ಪ ಗಲಗ,ಸಂತೋಷ ನಾಯಕ, ವೆಂಕಟೇಶಗೌಡ,ರಾಮನಗೌಡ ದೊಂಡ ‘ಂಬಳಿ,ನರಸಣ್ಣ,ರವಿ,ವೆಂಕಟೇಶ ವಕೀಲ, ದೇವಣ್ಣ ಸಮುದ್ರ ಸೇರಿದಂತೆ ಸ್ಥಳೀಯ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ನಿವೃತ್ತ ಶಿಕ್ಷಕರ ಜೀವನ ಸುಖಕರವಾಗಿರಲಿ: ಸಾಹಿತಿ ಶ್ರೀಕಾಂತ

o ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಸಮಾಜದಲ್ಲಿರುವ ಎಲ್ಲ ವೃತ್ತಿಗಳು ಮಾನವ ಪ್ರಯತ್ನದಿಂದ ಸಿಗುತ್ತವೆ ಆದರೆ ಶಿಕ್ಷಕ ವೃತ್ತಿ ದೇವರ ಕೃಪೆ ಇದ್ದರೆ ಮಾತ್ರ ಸಿಗುತ್ತದೆ.ಈ ಸೌಭಾಗ್ಯ ಎಲ್ಲರಿಗೂ ಸಿಗುವುದಿಲ್ಲ ಎಂದು ಜೆಎಸ್ ಜಿ ಫೌಂಡೇಶನ್ ಕಾರ್ಯದರ್ಶಿ,ಸಾಹಿತಿ ಶ್ರೀಕಾಂತ ಪತ್ತಾರ ಹೇಳಿದರು. ತಾಲ್ಲೂಕಿನ ಬ.ಸಾಲವಾಡಗಿ ಸರ್ಕಾರಿ ಪ್ರೌಢಶಾಲೆಯಲ್ಲಿ ಸಮಾಜ ವಿಜ್ಞಾನ ಬೋಧಕರಾಗಿ ಸೇವೆ ಸಲ್ಲಿಸಿ ವಯೋ ನಿವೃತ್ತಿಯಾಗಿರುವ ಐ.ಎಂ. ಚಿಮ್ಮಲಗಿ ಸಹಶಿಕ್ಷಕರಿಗೆ ಸರ್ಕಾರಿ ಪ್ರೌಡಶಾಲೆ ಮತ್ತು ನಾಗರಿಕರ ಸಂಯುಕ್ತಾಶ್ರಯದಲ್ಲಿ ಶಾಲಾ ಆವರಣದಲ್ಲಿ ಆಯೋಜಿಸಲಾಗಿದ್ದ ಕೃತಜ್ಞತಾ ಸಮಾರಂಭದಲ್ಲಿ ಶನಿವಾರ ಮಾತನಾಡಿದರು.**

ಈ ಶಾಲೆಯಲ್ಲಿ 20 ವರ್ಷಗಳವರೆಗೆ ನಿರಂತರವಾಗಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಚಿಮ್ಮಲಗಿ ಅವರು ಸಾವಿರಾರು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಿದ್ದಾರೆ ಅವರ ಸೇವೆ ಸದಾ



ಸ್ಮರಣೀಯವಾಗಿರುತ್ತದೆ ಅವರ ನಿವೃತ್ತ ಜೀವನ ಸುಖಕರವಾಗಿರಲೆಂದು ಹಾರೈಸುತ್ತೇನೆ ಎಂದರು. ಸಮಾರಂಭವನ್ನು ಉದ್ಘಾಟಿಸಿ ವಿಜಯಪುರ ಡಯಟ್ ಹಿರಿಯ ಉಪನ್ಯಾಸಕಿ ರೇಣುಕಾ ಕಲ್ಬುರ್ಗಿ ಮಾತನಾಡಿ ಚಿಮ್ಮಲಗಿ ಅವರ ಸೇವಾ ನಿಷ್ಠೆಯನ್ನು ಶ್ಲಾಘಿಸಿದರು. ಸನ್ಮಾನ ಸ್ವೀಕರಿಸಿ ನಿವೃತ್ತ ಶಿಕ್ಷಕ ಚಿಮ್ಮಲಗಿ ಅವರು ಮಾತನಾಡಿ ತಾವು ಎಂದು ನನಗೆ ನೀಡಿದ ಈ ಗೌರವ ಅವಿಸ್ಮರಣೆಯವಾದದ್ದು ನಾನು ಕೇವಲ ನನ್ನ ವೃತ್ತಿಯನ್ನು ಮಾತ್ರ ನಿರ್ವಹಿಸಿದ್ದೇನೆ ನಿಮ್ಮೆಲ್ಲರ ಪ್ರೀತಿ ವಿಶ್ವಾಸ ಗೌರವಕ್ಕೆ ಋಣಿಯಾಗಿದ್ದೇನೆ ಎಂದರು.

ಶಿಕ್ಷಣ ಪ್ರೇಮಿ ವೇ.ಮೂ.ಬಸಯ್ಯ ಹಿರೇಮಠ ಸಾನಿಧ್ಯ ವಹಿಸಿದ್ದರು. ಶಾಲೆಯ ಮುಖ್ಯಶಿಕ್ಷಕಿ ಸುಮಂಗಲಾ ಕೋಳೂರ ಅಧ್ಯಕ್ಷತೆ ವಹಿಸಿದ್ದರು. ಮುಖ್ಯಅತಿಥಿಗಳಾಗಿ, ಕ್ಷೇತ್ರ ಸಮನ್ವಯಾಧಿಕಾರಿ ಆರ್. ಬಿ. ದಮ್ಮೂರಮಠ , ಅಕ್ಷರದಾಸೋಹ ಸಹಾಯಕ ನಿರ್ದೇಶಕ ಡಾ. ಎಂ. ಎಂ. ಬೆಳಗಲ್, ದೈಹಿಕ ಶಿಕ್ಷಣ ಪರಿವೀಕ್ಷಕ ಎ.ಜಿ.ದಖನಿ, ಎಸ್.ಡಿ.ಎಂ.ಸಿ ಅಧ್ಯಕ್ಷ ಸಾಹೇಬಗೌಡ ಅನಂತರೆಡ್ಡಿ, ಭೂದಾನಿ ಭೀಮನಗೌಡ ಅನಂತರೆಡ್ಡಿ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಸಂಗನಗೌಡ ಲಿಂಗರೆಡ್ಡಿ,ಗ್ರಾ.ಪಂ.ಮಾಜಿ ಅಧ್ಯಕ್ಷ ಮುದಕನಗೌಡ ಹೊರಗಿನಮನಿ, ಪ್ರಮುಖರಾದರ ಮುದಕನಗೌಡ ದೊಡಮನಿ, ಶೇಖರಗೌಡ ರಾರಡ್ಡಿ, ಮಲ್ಲನಗೌಡ ಕಾರಲಕುಂಟಿ, ಭೂದಾನಿ ಭೀಮನಗೌಡ ಅನಂತರೆಡ್ಡಿ,

ಸರ್ಕಾರಿ ಪ್ರೌಢಶಾಲೆಗಳ ಮುಖ್ಯಶಿಕ್ಷಕರುಗಳಾದ ಪ್ರಕಾಶ ಸುರಪುರ, ಎಸ್. ಆರ್.ಮೋಮಿನ, ವಿದ್ಯಾದರ ಯಾತಗಿರಿ, ಎಸ್.ಎಸ್.ಗಡೇದ, ಟಿ.ಸಿ.ಸಜ್ಜನ, ಎ.ಎಂ. ಮೂಲಿಮನಿ, ಶಾಂತಪ್ಪನವರ, ನಿವೃತ್ತ ಮುಖ್ಯಶಿಕ್ಷಕ ಎಂ..ಜಿ.ಸುಣಗಾರ, ಬಿ.ಎಸ್. ದ್ಯಾಪುರ, ಬಿ.ಆರ್.ಪಿ ಕಾಶಿನಾಥ ಸಜ್ಜನ, ಸಿ.ಆರ್.ಪಿ.ಗಳಾದ ರಾಜು ವಿಜಾಪುರ ಹಾಗೂ ಎಸ್.ಎಂ.ಪಾಲಕಿ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಐ.ವಿ.ಬಡಿಗೇರ, ಉಪಸ್ಥಿತರಿದ್ದರು. ಅಜೀತ ಯಾಳಗಿ ನಿರ್ವಹಿಸಿದರು, ಸ್ವಾಗತಿಸಿದರು. ಹಿರಿಯ ವಿದ್ಯಾರ್ಥಿನಿ ತೇಜಶ್ವಿನಿ ದೇಸಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಗ್ರಾಮಸ್ಥರು, ಶಾಲೆ ಹಿರಿಯ ವಿದ್ಯಾರ್ಥಿಗಳು, ಶಿಕ್ಷಕ ವೃಂದ, ವಿದ್ಯಾರ್ಥಿಗಳು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಬೆಳಿಗ್ಗೆ ಗ್ರಾಮದ ಅಗಸಿ ಬಾಗಿಲಿನಿಂದ ಶಾಲೆಯವರೆಗೆ ಅಲಂಕರಿಸಿದ ಎತ್ತಿನ ಬಂಡಿಯಲ್ಲಿ ನಿವೃತ್ತ ಶಿಕ್ಷಕ ಈರಣ್ಣ ಚಿಮ್ಮಲಗಿ ದಂಪತಿ ಸಹಿತ ಮೆರವಣಿಗೆಯ ಮೂಲಕ ಕರೆತರಲಾಯಿತು.ಶಾಲಾ ಆವರಣದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ನೂರಾರು ವಿದ್ಯಾರ್ಥಿಗಳು, ಗ್ರಾಮಸ್ಥರು ಸನ್ಮಾನಿಸಿ ಗೌರವಿಸಿದರು. ವಿದ್ಯಾರ್ಥಿನಿಯರಿಂದ ಭರತ ನಾಟ್ಯ, ಲಂಬಾಣಿ ನೃತ್ಯ ಪ್ರದರ್ಶನ ನಡೆದವು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101